ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 86 RNI Number : KNKAN/25/A2770 05-04-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :86 ರಾಯಚೂರು 05-04-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

ಪಶ್ಚಿಮ ಏಷ್ಯಾ ಯುದ್ಧದ ಪರಿಣಾಮ: ತರಕಾರಿ ಬೆಲೆ ಕುಸಿತದಿಂದ ಸಂಕಷ್ಟದಲ್ಲಿ ರೈತರು, ವರ್ತಕರು

ಮೈಸೂರು,ಏ.04-

ಯುದ್ಧದ ಅಡ್ಡ ಪರಿಣಾಮ ಈಗ ರೈತರು ಮತ್ತು ವರ್ತಕರ ಮೇಲೂ ಬೀರುತ್ತಿದೆ. ತಾವು ಬೆಳೆದ ತರಕಾರಿಗಳನ್ನು ಕೊಳ್ಳುವವರು ಇಲ್ಲದೆ ಮಾರುಕಟ್ಟೆಗೆ ತಂದ ತರಕಾರಿಗಳನ್ನು ಕಡಿಮೆ ಬೆಲೆಗೆ ಮಾರಿ ಬೆಳೆದ ಖರ್ಚು ಸಿಗುತ್ತಿಲ್ಲ ಎಂದು ತಮ್ಮ ಅಳಲನ್ನು ಈಟಿವಿ ಭಾರತ್ ಜೊತೆ ಅವರು ತೋಡಿ ಕೊಂಡಿದ್ದಾರೆ.

ವಾಣಿಜ್ಯ ಸಿಲಿಂಡರ್‌ಗಳ ಕೊರತೆಯಿಂದ ಹೋಟೆಲ್‌ಗಳು ಬಂದ್ ಆಗಿದ್ದು, ಪರಿಣಾಮ ಹಳೆಯ ಮೈಸೂರು ಭಾಗದ ಪ್ರಮುಖ ತರಕಾರಿ ಮಾರುಕಟ್ಟೆಯಾದ ಆರ್ ಎಂಸಿ ಮಾರುಕಟ್ಟೆಗೆ ಕೇರಳಂ ಮತ್ತು ತಮಿಳುನಾಡಿನಿಂದ ಖರೀದಿ ಮಾಡಲು ವ್ಯಾಪಾರಸ್ಥರು ಬರುತ್ತಿಲ್ಲ. ಇದರಿಂದ ತರಕಾರಿಯನ್ನು ಕೊಳ್ಳಲು ವ್ಯಾಪಾರಸ್ಥರು ಬರದ ಹಿನ್ನೆಲೆಯಲ್ಲಿ ರೈತರು ಬೆಳೆದ ತರಕಾರಿ ಬೆಲೆ ಕುಸಿದಿದೆ. ಇದರಿಂದ ತಾವು ಬೆಳೆದ ತರಕಾರಿಗಳನ್ನು ಮಾರುಕಟ್ಟೆಗೆ ತಂದು ಮಾರಿದರೂ ತಾವು ಬೆಳೆದ ಕೂಲಿಯೂ ಸಿಗುತ್ತಿಲ್ಲ. ಇದರಿಂದ ಕಷ್ಟ ಆಗಿದೆ ಎಂದು ರೈತರು ತಮ್ಮ ಕಷ್ಟವನ್ನು ಹಂಚಿಕೊಂಡಿದ್ದಾರೆ.

ಹೂ-ಕೋಸು ಮತ್ತು ಮೆಣಸಿನಕಾಯಿ ಬೆಳೆಯನ್ನು ನಾಶಮಾಡಿದ ರೈತರು: ತಮ್ಮ 4 ಎಕರೆ ಜಮೀನಿನಲ್ಲಿ ಹೂಕೋಸು ಬೆಳೆದಿದ್ದ ಎಳಂದೂರು ತಾಲೂಕಿನ ಹೊನ್ನೂರು ಗ್ರಾಮದ ರೈತ ಬಸವಣ್ಣ ಎಂಬುವರು ಮಾರುಕಟ್ಟೆಯಲ್ಲಿ ಬೆಲೆ ಕುಸಿತದಿಂದ ಬೇಸರಗೊಂಡು ಕಟಾವಿಗೆ ಬಂದಿದ್ದ ಬೆಳೆಯನ್ನು ಟ್ರ್ಯಾಕ್ಟರ್ ಮೂಲಕ ನಾಶಪಡಿಸಿದ್ದಾರೆ.

ಮತ್ತೊಂದು ಕಡೆ ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಕಾಳೇನಹಳ್ಳಿ ಗ್ರಾಮದ ರೈತ ನಡೇಶ್ ಎಂಬುವರು ತಮ್ಮ 3 ಎಕರೆ ಜಮೀನಿನಲ್ಲಿ ಮೆಣಸಿನಕಾಯಿ ಬೆಳೆದಿದ್ದು, ಇದನ್ನು ಕೊಳ್ಳಲು ಕೇರಳದ ವ್ಯಾಪಾರಿಗಳು ಬರದ ಹಿನ್ನೆಲೆಯಲ್ಲಿ ಬೇಸರಗೊಂಡ ರೈತ ಕಟಾವಿಗೆ ಬಂದ ಮೆಣಸಿನಕಾಯಿ ಬೆಳೆಯನ್ನು ನಾಶಪಡಿಸಿ ಸರ್ಕಾರ ರೈತರ ತರಕಾರಿಗಳಿಗೆ ಬೆಂಬಲ ಬೆಲೆ ಘೋಷಿಸಬೇಕೆಂದು ಮನವಿ ಮಾಡಿದ್ದಾರೆ.

ತರಕಾರಿ ಬೆಲೆ ಕುಸಿತಕ್ಕೆ ಕಾರಣವೇನು: ಸಾಮಾನ್ಯವಾಗಿ ಮೈಸೂರು, ಚಾಮರಾಜನಗರ



ಹಾಗೂ ಮಂಡ್ಯ ಸೇರಿದಂತೆ ಈ ಭಾಗದಲ್ಲಿ ಬೆಳೆಯುವ ತರಕಾರಿಗಳನ್ನು ಕೇರಳ ಮತ್ತು ತಮಿಳುನಾಡಿನ ತರಕಾರಿ ವ್ಯಾಪಾರಸ್ಥರು ಕೊಂಡು ಕೊಂಡು ಅರಬ್ ದೇಶಗಳಿಗೆ ಕೇರಳದ ಮೂಲಕ ಕಳಿಸುವ ವ್ಯವಸ್ಥೆ ಇರುವುದರಿಂದ ಹೆಚ್ಚಾಗಿ ಮೈಸೂರಿನ ಸಗಟು ಮಾರುಕಟ್ಟೆಯ ಮೂಲಕ ತರಕಾರಿಗಳನ್ನು ಖರೀದಿ ಮಾಡುತ್ತಾರೆ. ಆದರೆ ಯುದ್ಧದ ಪರಿಣಾಮ ಈಗ ತರಕಾರಿ ಕೊಳ್ಳಲು ವ್ಯಾಪಾರಸ್ಥರು ಬರುತ್ತಿಲ್ಲ. ಮತ್ತೊಂದು ಕಡೆ ಈ ಭಾಗದಲ್ಲಿ ವಾಣಿಜ್ಯ ಸಿಲಿಂಡರ್ ಕೊರತೆಯಿಂದ ದೊಡ್ಡ ದೊಡ್ಡ ಹೋಟೆಲ್‌ಗಳು, ಪಿಜಿಗಳು ಸೇರಿದಂತೆ ಹಾಸ್ಟೆಲ್‌ಗಳು ಬಂದ್ ಆಗಿರುವುದು ತರಕಾರಿ ಬೆಲೆ ಕುಸಿತಕ್ಕೆ ಪ್ರಮುಖ ಕಾರಣ ಎನ್ನುತ್ತಾರೆ ಆರ್‌ಎಂಸಿಯ ಸಗಟು ವ್ಯಾಪಾರಸ್ಥ ಪರಮೇಶ್.

ತರಕಾರಿ ಬೆಲೆ ಕುಸಿತಕ್ಕೆ ರೈತರು ಹೇಳಿದ್ದೇನು: ಕಳೆದ 1 ತಿಂಗಳಿನಿಂದ ಮೈಸೂರು ಜಿಲ್ಲೆಯ ಹೆಚ್‌ಡಿ ಕೋಟೆ, ಸರಗೂರು, ಕೆ.ಆರ್ ನಗರ, ಹುಣಸೂರು, ಟಿ. ನರಸೀಪುರ ಹಾಗೂ ಚಾಮರಾಜನಗರ ಜಿಲ್ಲೆಯ ಗ್ರಾಮಗಳಿಂದ ಜೊತೆಗೆ ಮಂಡ್ಯ ಜಿಲ್ಲೆಯ ಹಲವು ಭಾಗಗಳಿಂದ ಮೈಸೂರಿನ ಸಗಟು ತರಕಾರಿ ಮಾರುಕಟ್ಟೆಯಾದ ಆರ್‌ಎಂಸಿ ಹಾಗೂ ಎಂಜಿ ರಸ್ತೆಯ ಮಾರುಕಟ್ಟೆಗಳಿಗೆ ತರಕಾರಿಗಳು ಬರುತ್ತವೆ. ಆದರೆ ಕಳೆದ 1 ತಿಂಗಳಿನಿಂದ ತರಕಾರಿ ಬೆಲೆ ಕಡಿಮೆಯಾಗಿದ್ದು, ಕೇರಳದಿಂದ ತರಕಾರಿ ಕೊಳ್ಳಲು ವ್ಯಾಪಾರಸ್ಥರು ಬರುತ್ತಿಲ್ಲ. ಮತ್ತೊಂದು ಕಡೆ ವಾಣಿಜ್ಯ ಸಿಲಿಂಡರ್ ಕೊರತೆಯಿಂದ ದೊಡ್ಡ ದೊಡ್ಡ ಹೋಟೆಲ್‌ಗಳು ಬಂದ್ ಆಗಿದೆ. ತರಕಾರಿ ಕೊಳ್ಳುವವರಿಲ್ಲ. ಈಗ ಕಳೆದ 1 ತಿಂಗಳ ಹಿಂದೆ 1 ಕೆಜಿಗೆ 25 ರೂಪಾಯಿ ಇದ್ದ ಟೊಮೆಟೊ ಬೆಲೆ ಈಗ 7 ರೂಪಾಯಿ ಆಗಿದೆ.

ಅದೇ ರೀತಿ ಹೂಕೋಸು 1 ಕೆಜಿಗೆ 20 ರೂಪಾಯಿ ಇತ್ತು. ಈಗ 3 ರೂಪಾಯಿ ಆಗಿದೆ. ಅದೇ ರೀತಿ 1 ಕೆಜಿ ಮೆಣಸಿನಕಾಯಿ 70 ರೂಪಾಯಿ ಇತ್ತು. ಈಗ 20 ರೂಪಾಯಿ ಆಗಿದೆ. ಕುಂಬಳಕಾಯಿ 1 ಕೆಜಿಗೆ 15 ರೂಪಾಯಿ ಇತ್ತು. ಈಗ 3 ರೂಪಾಯಿ ಆಗಿದೆ. ಸೌತೆಕಾಯಿ ಬೆಲೆ ಕೆಜಿಗೆ 30 ಇತ್ತು. ಈಗ 15 ರೂಪಾಯಿ ಆಗಿದೆ. ಜೊತೆಗೆ ಬದನೇಕಾಯಿ 20 ರೂಪಾಯಿ ಕೆಜಿಗೆ ಇತ್ತು. ಈಗ 10 ರೂಪಾಯಿ ಆಗಿದೆ. ಪಡುವಲಕಾಯಿ 30 ರೂಪಾಯಿ ಇದ್ದಿದ್ದು, 10 ರೂಪಾಯಿ ಆಗಿದೆ. ಹೀಗೆ ಒಟ್ಟಾರೆ ಒಂದೆರಡು ತರಕಾರಿ ಬೆಲೆಗಳು ಹೆಚ್ಚಾಗಿ ಬಿಟ್ಟರೆ ಬಹುತೇಕ ತರಕಾರಿ ಬೆಲೆಗಳು ಕಡಿಮೆಯಾಗಿವೆ. ಈಗ ಅವುಗಳನ್ನು ಬೆಳೆದು ಮಾರುಕಟ್ಟೆಗೆ ತರುವ ಕೂಲಿಯೂ ಆಗುವುದಿಲ್ಲ ಎಂದು ತರಕಾರಿ ಬೆಲೆ ಕಡಿಮೆಯಾಗಿರುವ ಬಗ್ಗೆ ರೈತರು ವಿವರಿಸಿದ್ದಾರೆ.

ಒಟ್ಟಾರೆ ಯುದ್ಧದ ಪರಿಣಾಮ ಸಿಲಿಂಡರ್ ಕೊರತೆ ಹಾಗೂ ಕೇರಳದಿಂದ ತರಕಾರಿಕೊಳ್ಳಲು ಬರದ ವ್ಯಾಪಾರಸ್ಥರು ಎಲ್ಲ ಕಾರಣಗಳಿಂದ ಕಳೆದ 1 ತಿಂಗಳಿನಿಂದ ತರಕಾರಿ ಬೆಲೆ ತೀವ್ರ ಕುಸಿತ ಕಂಡಿದೆ.

ಕಾಲುವೆ ಸೇರುತ್ತಿದೆ ಚರಂಡಿ ನೀರು

ರಾಯಚೂರು,ಏ.04-

ಕಲಬುರಗಿ ಪ್ರಾದೇಶಿಕ ಆಯುಕ್ತರ ಸೂಚನೆಯ ಮೇರೆಗೆ, ಬೇಸಿಗೆ ನಿಮಿತ್ತ ಕೊಪ್ಪಳ



ಜಿಲ್ಲೆಯ ಕೆಲವು ತಾಲ್ಲೂಕು ಮತ್ತು ರಾಯಚೂರು ಜಿಲ್ಲೆಯ ಕುಡಿಯುವ ಉದ್ದೇಶಕ್ಕಾಗಿ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯ ಕೆರೆಗಳು ಮತ್ತು ಜಲಾಗಾರಗಳನ್ನು ತುಂಬಿಸಿಕೊಳ್ಳಲು ಮಂಗಳವಾರದಿಂದ (ಮಾರ್ಚ್. 31) 15 ದಿನಗಳ ಕಾಲ ಕಾಲುವೆಯ ಮೂಲಕ ನೀರು ಹರಿಸಲಾಗುತ್ತಿದೆ.

ಕಾಲುವೆ ಆರಂಭದ (ಜೀರೋ ಮೈಲ್) ಮುನಿರಾಬಾದ್‌ನಿಂದ ಕಾಲುವೆಯ ಎರಡೂ ಬದಿ ಕಸ, ತ್ಯಾಜ್ಯ ಮತ್ತು ತಿಪ್ಪೆ ಹಾಕಲಾಗಿದ್ದು, ಅಕ್ಕಪಕ್ಕದ ಊರುಗಳ ಚರಂಡಿ ನೀರನ್ನು ಕೂಡ ಕಾಲುವೆಗೆ ನೇರವಾಗಿ ಹರಿಸಲಾಗುತ್ತಿದೆ. ಇದರಿಂದ ಕುಡಿಯುವ ಉದ್ದೇಶಕ್ಕಾಗಿ ಹರಿಯುತ್ತಿರುವ ನೀರಿಗೆ ನೇರವಾಗಿ ಚರಂಡಿ ನೀರು ಬೆರೆಯುತ್ತಿದೆ.

ಮುನಿರಾಬಾದ್ ಸಮೀಪ ಹೋಬಳಿ ಕೇಂದ್ರ ಹಿಟ್ನಾಳ ಗ್ರಾಮದಲ್ಲಿ ಇಂದಿರಾನಗರ ಕಾಲೋನಿ ಪ್ರದೇಶದ ಚರಂಡಿ ನೀರು ನೇರವಾಗಿ ಕಾಲುವೆಯನ್ನು ಸೇರುತ್ತಿರುವ ದೃಶ್ಯ ಕಂಡುಬಂದಿದೆ.

ಗಂಗಾಸ್ನಾನ ತುಂಗಾಪಾನ ಎನ್ನುವ ಲೋಕೋಕ್ತಿ ಪ್ರಸ್ತುತ ತನ್ನ ಅರ್ಥ ಕಳೆದುಕೊಂಡಿದೆ. ಕಸ, ತ್ಯಾಜ್ಯ ಮತ್ತು ಚರಂಡಿ ನೀರನ್ನು ಸೂಕ್ತವಾಗಿ ವಿಲೇವಾರಿ ಮಾಡುವ ಜವಾಬ್ದಾರಿ ಆಯಾ ಸ್ಥಳೀಯ ಸಂಸ್ಥೆಯದ್ದಾಗಿದೆ. ಸಂಸ್ಥೆಗಳ ದಿವ್ಯ ನಿರ್ಲಕ್ಷದಿಂದ ನೀರು ಕಲಬೆರಕೆಯಾಗುತ್ತಿದೆ. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಆರೋಗ್ಯ ಇಲಾಖೆ ಅಮಾಯಕರ ಆರೋಗ್ಯದ ಜೊತೆ ಚೆಲ್ಲಾಟವಾಡುತ್ತಿದೆ ಎಂದು ಆರೋಪಿಸುತ್ತಾರೆ. ಮೇಲ್ವಿಚಾರಣೆ ನಡೆಸಬೇಕಾದ ಆರೋಗ್ಯ ಇಲಾಖೆ ಅಧಿಕಾರಿಗಳು ಕೂಡ ಜಾಣ ಕುರುಡುತನ ಪ್ರದರ್ಶಿಸುತ್ತಿದ್ದಾರೆ.

ಕುಡಿಯಲು ಯೋಗ್ಯವಲ್ಲ: ಪಶ್ಚಿಮ ಘಟ್ಟದಲ್ಲಿ ಹುಟ್ಟುವ ತುಂಗಭದ್ರಾ ಹರಿದು ಬಂದು ಜಲಾಶಯ ಸೇರುವ ಮಧ್ಯೆ ಹಲವು ಕಾರ್ಖಾನೆಗಳ ಮಲಿನಯುಕ್ತ ನೀರು ಮತ್ತು ಕೆಲವು ನಗರ, ಪಟ್ಟಣಗಳ ಚರಂಡಿ ನೀರು ಸೇರುತ್ತಿದೆ ಎಂದು ಅಧ್ಯಯನ ನಡೆಸಿದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ತುಂಗಭದ್ರೆಯ ನೀರು ನೇರವಾಗಿ ಕುಡಿಯಲು ಬಳಸಬೇಡಿ ಎಂದು ಅಧಿಕೃತ ಪ್ರಕಟಣೆ ಮೂಲಕ ಎಚ್ಚರಿಕೆ ನೀಡಿದೆ. ಆದ್ದರಿಂದ ಜನವಸತಿ ಪ್ರದೇಶದ ಚರಂಡಿ ನೀರು ನೇರವಾಗಿ ಕಾಲುವೆಗೆ ಸೇರದಂತೆ ತಕ್ಷಣ ಕ್ರಮ ಕೈಗೊಳ್ಳುವಂತೆ ಮಾಲಿನ್ಯದ ವಿರುದ್ಧ ಹೋರಾಟ ನಡೆಸುತ್ತಿರುವ ಪರಿಸರ ಪ್ರೇಮಿಗಳು ಆಗ್ರಹಿಸಿದ್ದಾರೆ.

ಎನ್‌ಟಿಆರ್ ಪುತ್ಥಳಿ ಲೋಕಾರ್ಪಣೆಗೊಳಿಸಿ ಎಚ್.ಡಿ.ಕುಮಾರಸ್ವಾಮಿ


ಕರ್ನಾಟಕ ತಾಯಿ ಮಮತೆಯಲ್ಲಿ ಆಂಧ್ರ ಜನರ ಬದುಕು : ನಾರಾ ಲೋಕೇಶ್

ಸಿಂಧನೂರು : ದಶಕಗಳ ಹಿಂದೆ ಆಂಧ್ರಪ್ರದೇಶದಿಂದ ವಲಸೆ ಬಂದು ಕರ್ನಾಟಕದಲ್ಲಿ ನೆಲೆಸಿದ ಜನತೆಗೆ ಈ ರಾಜ್ಯ ತಾಯಿ ಮಮತೆಯೊಂದಿಗೆ ಆಶ್ರಯ ನೀಡಿದೆ ಎಂದು ಆಂಧ್ರಪ್ರದೇಶದ ಐಟಿ ಮತ್ತು ಶಿಕ್ಷಣ ಇಲಾಖೆ ಸಚಿವ ನಾರಾ ಲೋಕೇಶ್ ಹೇಳಿದರು.

ನಗರದ ಕಮ್ಮವಾರಿ ಕಲ್ಯಾಣ ಮಂಟಪದಲ್ಲಿ ಎನ್.ಟಿ.ರಾಮರಾವ್ ಅವರ ಪುತ್ಥಳಿ ಅನಾವರಣಗೊಳಿಸಿ ಮಾತನಾಡಿದ ಅವರು, ಕರ್ನಾಟಕದ ಮಣ್ಣಿನ ಋಣ ತೀರಿಸಲು ಇಲ್ಲಿ ಬಂದಿದ್ದೇನೆ. 1970ರ ದಶಕದಲ್ಲಿ ವಲಸೆ ಬಂದ ಆಂಧ್ರ ಜನತೆಗೆ ಕರ್ನಾಟಕ ಎಲ್ಲಾ ಸೌಕರ್ಯ ಒದಗಿಸಿ ತಾಯಿ ಭುವನೇಶ್ವರಿಯಂತೆ ಮಮತೆ ತೋರಿದೆ. ಕನ್ನಡ ಮತ್ತು ಕರ್ನಾಟಕದ ಋಣವನ್ನು ಮರೆಯಬಾರದು ಎಂದು ಕರೆ ನೀಡಿದರು.

ತಮ್ಮ ತಂದೆ, ಆಂಧ್ರಪ್ರದೇಶದ ಮುಖ್ಯಮಂತ್ರಿ ನಾರಾ ಚಂದ್ರಬಾಬು ನಾಯ್ಡು ಜೈಲಿಗೆ ಹೋದ ಸಂದರ್ಭದಲ್ಲಿ ಸಿಂಧನೂರು ಸೇರಿದಂತೆ ಕರ್ನಾಟಕದ ಜನತೆ ನೀಡಿದ ಬೆಂಬಲವನ್ನು ಸ್ಮರಿಸಿದ ಅವರು, ಕರ್ನಾಟಕದಲ್ಲಿ ನೆಲೆಸಿರುವ ಆಂಧ್ರ ಜನತೆಗೆ ಸದಾ ಋಣಿಯಾಗಿರುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಕೇಂದ್ರ ರಕ್ಷಣಾ ಇಲಾಖೆಯ ರಾಜ್ಯ ಖಾತೆ ಸಚಿವ ಸಂಜಯ್ ಶೇಠ್, ರಾಜ್ಯ ಸಚಿವ ಎನ್.ಎಸ್. ಬೋಸರಾಜ್, ವಿಶಾಖಪಟ್ಟಣ ಲೋಕಸಭಾ ಸದಸ್ಯ ಮೋತುಕುಮಿಲ್ಲಿ ಭರತ್, ವಿಧಾನಪರಿಷತ್ ಸದಸ್ಯ



ಬಸನಗೌಡ ಬಾದರ್ಲಿ, ಮಾಜಿ ಶಾಸಕ ವೆಂಕಟರಾವ್ ನಾಡಗೌಡ, ರಾಜಾ ವೆಂಕಟಪ್ಪ ನಾಯಕ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕುಮಾರಸ್ವಾಮಿಗೆ ಮೆಚ್ಚುಗೆ ವ್ಯಕ್ತಪಡಿಸಿದ ನಾರಾ ಲೋಕೇಶ್ :

ಕಾರ್ಯಕ್ರಮದಲ್ಲಿ ಮಾತನಾಡಿದ ನಾರಾ ಲೋಕೇಶ್, ದೇವೆಗೌಡರ ಕುಟುಂಬದೊಂದಿಗೆ ನಮ್ಮ ಕುಟುಂಬಕ್ಕೆ ಅವಿನಾಭಾವ ಸಂಬಂಧವಿದೆ. ಚಂದ್ರಬಾಬು ನಾಯ್ಡು ಮತ್ತು ದೇವೆಗೌಡರು ಕೇಂದ್ರದಲ್ಲಿ ಒಟ್ಟಿಗೆ ಕೆಲಸ ಮಾಡಿದ್ದಾರೆ. ಈಗ ನಾನು ಮತ್ತು ಕುಮಾರಸ್ವಾಮಿ ಸಹ ಜೊತೆಯಾಗಿ ಕೆಲಸ ಮಾಡುತ್ತಿದ್ದೇವೆ ಎಂದರು.

ಹಳೆಯ ಸರ್ಕಾರದ ಅವಧಿಯಲ್ಲಿ ಮುಚ್ಚಲ್ಪಟ್ಟ

3ನೇ ಪುಟಕ್ಕೆ

ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ : ಎಚ್.ಡಿ.ಕುಮಾರಸ್ವಾಮಿ

ಸಿಂಧನೂರು, ಏ.04-

ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷ ಜನರ ವಿಶ್ವಾಸ ಕಳೆದುಕೊಂಡಿದ್ದು, ನಡೆಯುತ್ತಿರುವ ಉಪಚುನಾವಣೆಯಲ್ಲಿ ಎರಡು ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.

ಶನಿವಾರ ನಗರದ ಕಮ್ಮವಾರಿ ಕಲ್ಯಾಣ ಮಂಟಪದಲ್ಲಿ ನಡೆದ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಎನ್.ಟಿ. ರಾಮರಾವ್ ಅವರ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉಪಚುನಾವಣೆಯನ್ನು ಎರಡು ಪ್ರಮುಖ ಪಕ್ಷಗಳು ಅತ್ಯಂತ ಪ್ರತಿಷ್ಠೆಯಾಗಿ ತೆಗೆದುಕೊಂಡಿವೆ ಎಂದು ಹೇಳಿದರು.

ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿಯೊಂದಿಗೆ ಎರಡು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ. ಕಾಂಗ್ರೆಸ್ ಪಕ್ಷದ ದುರಾಡಳಿತಕ್ಕೆ ಜನತೆ ಬೇಸತ್ತು ಹೋಗಿದ್ದು, ಉಪಚುನಾವಣೆಯಲ್ಲಿ ಕಾಂಗ್ರೆಸ್ ಅನ್ನು ಸೋಲಿಸಬೇಕು



ಎಂಬ ಮನೋಭಾವ ಜನರಲ್ಲಿ ಕಂಡುಬರುತ್ತಿದೆ ಎಂದು ಹೇಳಿದರು.

ಉಪಚುನಾವಣೆ ಹಿನ್ನಲೆಯಲ್ಲಿ ಪ್ರಚಾರಕ್ಕಾಗಿ ತೆರಳುತ್ತಿರುವುದಾಗಿ ತಿಳಿಸಿದ ಅವರು, ದಾವಣಗೆರೆ ಕ್ಷೇತ್ರದಲ್ಲಿ ಎರಡು ಸಭೆಗಳಲ್ಲಿ ಹಾಗೂ ಭಾನುವಾರ ಬಾಗಲಕೋಟೆ ಕ್ಷೇತ್ರದಲ್ಲಿ ಪ್ರಚಾರ ನಡೆಸುವುದಾಗಿ ಹೇಳಿದರು. ಎರಡೂ ಪಕ್ಷಗಳು ಗೆಲುವಿಗಾಗಿ ಹೋರಾಟ ನಡೆಸುತ್ತಿದ್ದರೂ, ಅಂತಿಮವಾಗಿ ಬಿಜೆಪಿ ಅಭ್ಯರ್ಥಿಗಳೇ ಜಯ ಸಾಧಿಸಲಿದ್ದಾರೆ ಎಂಬ ವಿಶ್ವಾಸವಿದೆ ಎಂದು ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ದಿ.7 ಮಾನ್ವಿಗೆ ನಿವೃತ್ತ ಐಜಿಪಿ ಶಂಕರ ಬಿದರಿ ಆಗಮನ

ಮಾನ್ವಿ,ಏ.03-

ಪಟ್ಟಣಕ್ಕೆ ನಿವೃತ್ತ ಐ ಜಿ ಪಿ ಶಂಕರ್ ಬಿದರಿ ಆಗಮಿಸಲಿದ್ದಾರೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾ. ಅಧ್ಯಕ್ಷರಾದ ಅರುಣಕುಮಾರ ಚಂದಾ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು ಏ.5 ರಂದು ಬೆಳಿಗ್ಗೆ 11 ಕ್ಕೆ ಪಟ್ಟಣದ ಸಿದ್ದರ್ಥ ಕಾಲೇಜಿನಲಿ ನಡೆಯುವ ಬೇಸಿಗೆ ತರಬೇತಿ ಶಿಬಿರಕ್ಕೆ ಸಚಿವ ಎನ್. ಎಸ್.ಬೋಸರಾಜು ರವರು ಚಾಲನೆ ನೀಡಲಿದ್ದಾರೆ.

ಏ.7 ರಂದು ಬೆಳಿಗ್ಗೆ ಮಾನ್ವಿ ಪಟ್ಟಣಕ್ಕೆ ಆಗಮಿಸುವ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ



ಸಭಾ ಬೆಂಗಳೂರು ರಾಜ್ಯಾಧ್ಯಕ್ಷರಾದ ಶಂಕರ ಬಿದರಿ ನಿವೃತ್ತ ಐ.ಜಿ.ಪಿ. ರವರನ್ನು ಸಮಾಜದಿಂದ ಭವ್ಯವಾಗಿ ಸ್ವಾಗತಿಸಲಾಗುವುದು ಶಂಕರ ಬಿದರಿರವರು ಮಾನ್ವಿ ಪಟ್ಟಣದಲ್ಲಿನ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದ ಕಚೇರಿಗೆ ಭೇಟಿ ನೀಡಿ ಸದಸ್ಯರೊಂದಿಗೆ ಹಾಗೂ ಸಮಾಜದ ಗಣ್ಯರೊಂದಿಗೆ ಚರ್ಚೆ ನಡೆಸಲಿದ್ದಾರೆ.

ನಂತರ ಮಧ್ಯಾಹ್ನ 2 ಕ್ಕೆ ಹಿರಿಯ ವಕೀಲರಾದ ಸಿದ್ದಲಿಂಗಪ್ಪ ರವರ ನಿವಾಸದಲ್ಲಿ ಸಮಾಜದವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಸಂಜೆ 5ಕ್ಕೆ ತಾಲೂಕಿನ ಅಡವಿ ಅಮರೇಶ್ವರ ಗ್ರಾಮದಲ್ಲಿನ ಸುವರ್ಣಗಿರಿ ವಿರಕ್ತಮಠ ಶ್ರೀ ಅಡವಿ ಅಮರೇಶ್ವರ ಮಠದಲ್ಲಿ 72 ನೇ ಜಾತ್ರ ಮಹೋತ್ಸವದ ಅಂಗವಾಗಿ ನಡೆಯುವ ಸುವರ್ಣಗಿರಿ ವಿರಕ್ತಮಠ ಒಳಬಳ್ಳಾರಿಯ ಶ್ರೀ ಡಾ.ಸಿದ್ದಲಿಂಗ ಮಹಾಸ್ವಾಮಿಗಳ ಗುರುವಂದನೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಸುವರ್ಣಗಿರಿ ವಿರಕ್ತಮಠ ಶ್ರೀ ಅಡವಿ ಅಮರೇಶ್ವರ ಮಠದ ಶ್ರೀ ತೊಂಟದಾರ್ಯ ಮಹಾ ಸ್ವಾಮಿಗಳಿಂದ ಮಹಾರಥೋತ್ಸ ವಕ್ಕೆ ಚಾಲನೆ ಹಾಗೂ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಜೀವನ ದರ್ಶನ ಪ್ರವಚನ ಮಹಾಮಂಗಲ ಕಾರ್ಯಕ್ರಮ , ಜಾನುವಾರುಗಳ ಜಾತ್ರೆ, ಅಂಗವಾಗಿ ಎತ್ತುಗಳಿಂದ ಭಾರ ಎಳೆಯುವ ಸ್ಪರ್ಧೆ ಏರ್ಪಾ ಡಿಸಲಾಗಿದೆ.

ಕಾರ್ಯಕ್ರಮದಲ್ಲಿ ವಿವಿಧ ಮಠಗಳ ಶ್ರೀಗಳು ಹಾಗೂ ಗಣ್ಯರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಈ ಸಂಧರ್ಭದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಕಾರ್ಯಕರಿಣಿ ಸದಸ್ಯರಾದ ಸಿದ್ದಲಿಂಗಪ್ಪ ವಕೀಲರು, ತಾಲೂಕು ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾದ ಹರಿಹರಪಾಟೀಲ್, ಗೌ.ಅಧ್ಯಕ್ಷರಾದ ಶ್ರೀಧರ ಸ್ವಾಮಿ,ತಿಮ್ಮರೆಡ್ಡಿ ಭೋಗವತಿ, ಜಗದೀಶ ಓತ್ತೂರು, ಗುರುಸಿದ್ದಪ್ಪ ಕಣ್ಣೂರು, ವೀರನಗೌಡ ವಕೀಲರು,ಮಲ್ಲನಗೌಡ ನಕ್ಕುಂದಿ ವಕೀಲರು.ಶಂಕರಪ್ಪ ಸೇರಿದಂತೆ ಸಮಾಜದ ಮುಖಂಡರು ಇದ್ದರು.

ಮಾನ್ವಿ: ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ ಅಧಿಕಾರಿಗಳ ಸಭೆ

ಮಾನ್ವಿ,ಏ.03-

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ನಿರ್ವಹಣೆ ಕುರಿತು ನಡೆದ ಮಾನ್ವಿ ಮತ್ತು ಸಿರವಾರ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್. ಬೋಸರಾಜು ಮಾತನಾಡಿದರು.



ಮಾನ್ವಿ ಹಾಗೂ ಸಿರವಾರ ತಾಲೂಕುಗಳಲ್ಲಿನ ಪಟ್ಟಣ ಹಾಗೂ ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರಿನ ತೊಂದರೆಯಾಗದ0ತೆ ತುಂಗಭದ್ರಾ ಎಡದಂಡೆ ಕಾಲುವೆಯಿಂದ ನೀರನ್ನು ಬಿಡುಗಡೆ ಮಾಡಲಾಗುತ್ತಿದೆ.

ಕಾಲುವೆ ನೀರನ್ನು ಅಕ್ರಮವಾಗಿ ಬಳಸಿಕೊಳ್ಳದಂತೆ ಕೆರೆಗಳಿಗೆ ತಲುಪುವುದಕ್ಕಾಗಿ ಮಾನ್ವಿ ಪೊಲೀಸ್ ಠಾಣೆಯ ಪಿ.ಐ. ಸೋಮಶೇಖರ ಎಸ್.ಕೆಂಚರೆಡ್ಡಿ ಹಾಗೂ ಕವಿತಾಳ, ಸಿರವಾರ ಪೊಲೀಸ್ ಠಾಣೆಯ ಪೊಲೀಸ್ ಅಧಿಕಾರಿಗಳು ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಕೆರೆ ತುಂಬಿಸುವುದಕ್ಕಾಗಿ ಅಗತ್ಯ ಭದ್ರತೆಯನ್ನು ನೀಡಬೇಕು.

ಕಾಲುವೆಯ ನೀರನ್ನು ಬಳಸಿಕೊಂಡು ಮಾನ್ವಿ ಮತ್ತು ಸಿರವಾರ ತಾಲೂಕುಗಳಲ್ಲಿನ ಕೆರೆಗಳನ್ನು ತುಂಬಿಸಿಕೊಳ್ಳುವುದಕ್ಕೆ ಮಾನ್ವಿ ಹಾಗೂ ಸಿರವಾರ ತಾಲೂಕಿನ ತಹಶೀಲ್ದಾರರು, ತಾಲೂಕು ಪಂಚಾಯಿತಿ ಇ.ಓಗಳು, ಗ್ರಾಮ ಪಂಚಾಯಿತಿ ಆಡಳಿತ ಅಧಿಕಾರಿಗಳು, ಮಾನ್ವಿ ಪುರಸಭೆ ಹಾಗೂ ಸಿರವಾರ,ಕವಿತಾಳ,ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು.

ಕುಡಿಯುವ ನೀರಿನ ತೊಂದರೆ ಕಂಡುಬದಲ್ಲಿ ಆ ಭಾಗದ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು ಎಂದು ತಿಳಿಸಿದರು.

ಶಾಸಕ ಜಿ.ಹಂಪಯ್ಯ ನಾಯಕ್ ಮಾತನಾಡಿ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ತೊಂದರೆಯಾಗದತೆ ಗ್ರಾಮಗಳಲ್ಲಿನ ಕೊಳವೆ ಬಾವಿಗಳನ್ನು ಸರಿಯಾಗಿ ನಿರ್ವಹಣೆ ಮಾಡಬೇಕು ,ನೀರಿಲ್ಲದೆ ಇರುವ ಕೊಳವೆ ಬಾವಿಗಳಿಗೆ ಫ್ಲಾಶಿಂಗ್ ಮಾಡಿಸಲು ಕ್ರಮ ಕೈಗೊಳ್ಳಬೇಕು. ಕೊಳವೆ ಬಾವಿಗಳಲ್ಲಿನ ಮೋಟರ್ ಯಂತ್ರಗಳ ದುರಸ್ತಿ ಕಾರ್ಯವನ್ನು ನಿರ್ವಹಿಸಬೇಕು ಎಂದು ಸೂಚಿಸಿದರು.

ಈ ಸಂಧರ್ಭದಲ್ಲಿ ನಯೋಪ್ರ ತಾ. ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಾಬ್, ತಾ.ಪಂಚ ಗ್ಯಾರಂಟಿಗಳ ಸಮಿತಿ ಅಧ್ಯಕ್ಷರಾದ ಬಿ.ಕೆ .ಅಂಬರೇಶಪ್ಪ ವಕೀಲರು, ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ, ತಾಲೂಕು ಪಂಚಾಯಿತಿ ಇ.ಓ. ಖಾಲಿದ್ ಅಹಮ್ಮದ್, ಪುರಸಭೆ ಮುಖ್ಯಾಧಿಕಾರಿ ಪರಶುರಾಮ ದೇವಮಾನೆ, ಪಿ.ಐ. ಸೋಮಶೇಖರ ಎಸ್. ಕೆಂಚರೆಡ್ಡಿ ಸೇರಿದಂತೆ ಮಾನ್ವಿ ಮತ್ತು ಸಿರವಾರ ತಾಲೂಕು ಮಟ್ಟದ ಅಧಿಕಾರಿಗಳು, ಪುರಸಭೆ ಸಿಬ್ಬಂದಿಗಳು ಭಾಗವಹಿಸಿದ್ದರು.

ಮೇ.17 ರಂದು ಜಿಲ್ಲಾ ಮಟ್ಟದ ವಾಲ್ಮೀಕಿ ಜಾಗೃತಿ ಸಮಾವೇಶ - ಡಾ.ಶ್ರೀ ಪ್ರಸನ್ನಾನಂದ ಶ್ರೀಗಳು



ಸಿರಿವಾರ.ಏ.04-

ವಾಲ್ಮೀಕಿ ನಾಯಕ ಒಕ್ಕೂಟದ ವತಿಯಿಂದ ಜಿಲ್ಲಾ ಮಟ್ಟದ ವಾಲ್ಮೀಕಿ ಜಾಗೃತಿ ಸಮಾವೇಶ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಶ್ರೀಗಳ ಸಮುಮ್ಮಖದಲ್ಲಿ ಸಮಾಜದ ಮುಖಂಡರೊಂದಿಗೆ ಶನಿವಾರ ಚರ್ಚೆ ನಡೆಸಲಾಯಿತು. ವಾಲ್ಮೀಕಿ ಸಮಾಜದ ಜನಾಂಗವು ಶೈಕ್ಷಣಿಕವಾಗಿ, ಆರ್ಥಿಕವಾಗಿ,ಸಾಮಾಜಿಕವಾಗಿ, ರಾಜಕೀಯವಾಗಿ, ಹಿಂದುಳಿದಿದ್ದು ಅವರಿಗೆ ಎಲ್ಲಾ ಕ್ಷೇತ್ರದಲ್ಲಿ ಮೀಸಲು ನೀಡಬೇಕೆಂದು ಒತ್ತಾಯಿಸಿ ಜಿಲ್ಲಾ ಮಟ್ಟದ ವಾಲ್ಮೀಕಿ ಜಾಗೃತಿ ಸಮಾವೇಶ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭವನ್ನು ದಿನಾಂಕ 17 -5-2026 ರಂದು ಸಿರವಾರ ತಾಲ್ಲೂಕಿನ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಒಂದು ಸಮಾವೇಶ ಹಾಗೂ ಸನ್ಮಾನ ಸಮಾರಂಭದ ಕಾರ್ಯಕ್ರಮದಲ್ಲಿ ಸಚಿವರು, ಮಾಜಿ ಸಚಿವರು, ಸಂಸದರು, ಮಾಜಿ ಸಂಸದರು, ಶಾಸಕರು, ಮಾಜಿ ಶಾಸಕರು, ಹಾಗೂ ರಾಜಕೀಯ ಮುಖಂಡರು, ಸಮಾಜದ ಹಿರಿಯ ಮುಖಂಡರು ಮತ್ತು ಸಂಘಟಕರು ಭಾಗವಹಿಸಲಿದ್ದಾರೆ.

ಸಮಾಜದ ಎಲ್ಲಾ ಬಾಂಧವರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು. ಈ ಸಂಧರ್ಭದಲ್ಲಿ ಸಮಾಜದ ಮುಖಂಡರಾದ ವೆಂಕಟೇಶ್ ಶಂಕ್ರಿ ದೇವತ್ಗಲ್, ಲಿಂಗಯ್ಯ ನಾಯಕ್ ಸೈದಾಪುರ

3ನೇ ಪುಟಕ್ಕೆ

ಮಠದ ಜಮೀನಿನಲ್ಲಿ ಸರಕಾರಿ ಕಟ್ಟಡ ನಿರ್ಮಾಣಕ್ಕೆ ವಿರೋಧ : ಭಕ್ತರ ಆಕ್ರೋಶ

ಕುಕನೂರು , ಏ.04-

ಪಟ್ಟಣದ ಐತಿಹಾಸಿಕ ಧಾರ್ಮಿಕ ಕ್ಷೇತ್ರವಾದ ಗುದ್ನೇಶ್ವರ ಮಠದ ರುದ್ರಮುನೀಶ್ವರ ದೇವಸ್ಥಾನಕ್ಕೆ ಸೇರಿದ ಜಮೀನಿನಲ್ಲಿ ಸರ್ಕಾರಿ ಕಟ್ಟಡಗಳ ನಿರ್ಮಾಣಕ್ಕೆ ಹುಬ್ಬಳ್ಳಿ-ಧಾರವಾಡ ಭಾಗದ ಭಕ್ತರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಗುರುವಾರ ಪಟ್ಟಣದ ಗುದ್ನೇಪ್ಪನ ಮಠದ ದೇವಸ್ಥಾನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಭಕ್ತರು ಅಧಿಕಾರಿಗಳ ಕ್ರಮವನ್ನು ತೀವ್ರವಾಗಿ ಖಂಡಿಸಿದರು.

ಗದಗ ಜಿಲ್ಲೆಯ ನೀಲಗುಂದ ಗ್ರಾಮದ ಭಕ್ತರಾದ ಬಸಪ್ಪ ಪೂಜಾರ್ ಹಾಗೂ ಪ್ರಭು ಅಂಗಡಿ ಮಾತನಾಡಿ, 2023ರಲ್ಲಿ ಸರ್ವೇ ನಂ.78ರಲ್ಲಿ ಇರುವ ಮಠದ 26 ಎಕರೆ ಭೂಮಿಯಲ್ಲಿ ಸರ್ಕಾರಿ ಕಟ್ಟಡ ನಿರ್ಮಾಣಕ್ಕೆ ಆದೇಶ ಮಾಡಲಾಗಿದೆ ಎಂದು ಆರೋಪಿಸಿದರು.

ಈ ಕ್ರಮದ ವಿರುದ್ಧ 18 ಸೇವಾದಾರರು ನ್ಯಾಯಾಲಯದ ಮೊರೆ ಹೋಗಿದ್ದು, ಭೂ ನ್ಯಾಯಮಂಡಳಿ 40 ಎಕರೆ ಭೂಮಿಯನ್ನು ಮಂಜೂರು ಮಾಡುವಂತೆ ಆದೇಶ ನೀಡಿದೆ. ಪ್ರಕರಣ ಧಾರವಾಡ ಹೈಕೋರ್ಟ್‌ನಲ್ಲಿ ವಿಚಾರಣೆಯಲ್ಲಿದ್ದು, ಪ್ರಸ್ತುತ ಸ್ಟೇ ಆದೇಶ ಜಾರಿಯಲ್ಲಿದೆ ಎಂದರು. ಇದಾದ ಬಳಿಕವೂ ಮತ್ತೆ 17 ಎಕರೆ ಭೂಮಿಯಲ್ಲಿ ಕಾಮಗಾರಿಗಳಿಗೆ ಅನುಮತಿ ಪಡೆಯಲಾಗಿದ್ದು, ನ್ಯಾಯಾಲಯದ



ಆದೇಶ ವನ್ನು ಉಲ್ಲಂಘಿಸಲಾಗುತ್ತಿದೆ ಎಂದು ಆರೋಪಿಸಿದರು.

ಈ ವೇಳೆ ಪ್ರಭು ಅಂಗಡಿ ಮಾತನಾಡಿ, ಶಾಸಕರು ಐದು ವರ್ಷಕ್ಕೊಮ್ಮೆ ಬದಲಾಗುತ್ತಾರೆ; ಆದರೆ ಭಕ್ತರು ಶಾಶ್ವತ. ನ್ಯಾಯಾಲಯದ ಅಂತಿಮ ತೀರ್ಪಿಗೆ ನಾವು ಬದ್ಧರಾಗಿದ್ದೇವೆ. ಆದರೆ ತೀರ್ಪು ಬರುವ ಮೊದಲು ಯಾವುದೇ ಕಾಮಗಾರಿಗಳು ನಡೆಯಬಾರದು,'' ಎಂದು ಹೇಳಿದರು.

ಮಠದ ಭೂಮಿಯನ್ನು ಧಾರ್ಮಿಕ ಉದ್ದೇಶಗಳಿಗೆ ಮೀಸಲಿಟ್ಟಿರುವುದರಿಂದ ಬೇರೆ ಉದ್ದೇಶಗಳಿಗೆ ಬಳಸಲು ಅವಕಾಶ ನೀಡುವುದಿಲ್ಲ. ''ಪ್ರಾಣ ಕೊಡುತ್ತೇವೆ, ಭೂಮಿ ಕೊಡುವುದಿಲ್ಲ,'' ಎಂದು ಭಕ್ತರು ಎಚ್ಚರಿಕೆ ನೀಡಿದರು.

ಈಗಾಗಲೇ ಮಠದ 214 ಎಕರೆ ಭೂಮಿಯಲ್ಲಿ ನವೋದಯ ಶಾಲೆ, ಐಟಿಐ ಕಾಲೇಜು, ಮುರಾರ್ಜಿ ಶಾಲೆ, ಸರ್ಕಾರಿ ಪದವಿ ಕಾಲೇಜು ಸೇರಿದಂತೆ ಹಲವು ಕಟ್ಟಡಗಳು ನಿರ್ಮಾಣಗೊಂಡಿವೆ. ಉಳಿದ ಭೂಮಿಯಲ್ಲಿ ಯೂ ಕಟ್ಟಡ ನಿರ್ಮಾಣ ಮಾಡಿದರೆ ಜಾತ್ರೆ ಸೇರಿದಂತೆ ಧಾರ್ಮಿಕ ಚಟುವಟಿಕೆಗಳಿಗೆ ಅಡಚಣೆ ಉಂಟಾಗುತ್ತದೆ ಎಂದು ಹೇಳಿದರು.

ಗ್ರಾಮದಲ್ಲಿ ಅನಗತ್ಯ ಭೂ ಮತ್ತು ಮನೆಗಳ ಸರ್ವೇ ನಡೆಸಿ ಗ್ರಾಮಸ್ಥರಲ್ಲಿ ಭೀತಿ ಮೂಡಿಸಲಾಗುತ್ತಿದೆ ಎಂದು ದೂರಿದರು.

ನ್ಯಾಯಾಲಯದ ಅಂತಿಮ ತೀರ್ಪು ಬರುವವರೆಗೆ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳಬಾರದು. ಇಲ್ಲವಾದಲ್ಲಿ ಸಂಭವಿಸಬಹುದಾದ ಅನಾಹುತಗಳಿಗೆ ಸರ್ಕಾರ ಮತ್ತು ಜಿಲ್ಲಾ ಆಡಳಿತವೇ ಹೊಣೆ ಎಂದು ಭಕ್ತರು ಎಚ್ಚರಿಸಿದರು.

ಬಳಿಕ ಭಕ್ತರು ಕುಕನೂರು ತಹಶೀಲ್ದಾರ್ ಕಚೇರಿಗೆ ತೆರಳಿ ಮನವಿ ಪತ್ರ ಸಲ್ಲಿಸಿದರು.

ಚಿತ್ತಾಪುರ :ಏ.10 ರಂದು ವೈದಿಕ ಸಂಸ್ಕಾರ ಶಿಬಿರ



ಚಿತ್ತಾಪುರ, ಏ.04-

ಜಂಗಮ ಸಮಾಜದ ವಿದ್ಯಾರ್ಥಿಗಳಿಗೆ ಪೂಜೆ, ಪಾಠ, ಮಂತ್ರೋಪದೇಶ ಸೇರಿದಂತೆ 45 ದಿನಗಳ ವೈದಿಕ ಸಂಸ್ಕಾರ ಶಿಬಿರವನ್ನು ಏ.10ರಿಂದ ಆಯೋಜಿಸಲಾಗಿದ್ದು, ಇದನ್ನು ಸಚಿವ ಪ್ರಿಯಾಂಕ್ ಖರ್ಗೆ ಉದ್ಘಾಟಿಸಲಿದ್ದಾರೆ ಎಂದು ಜಂಗಮ ಸಮಾಜದ ತಾಲೂಕು ಅಧ್ಯಕ್ಷ ಶಂಕರಯ್ಯ ಸ್ವಾಮಿ ಮದ್ರಿ ತಿಳಿಸಿದ್ದಾರೆ.

ಪಟ್ಟಣದ ಅಕ್ಕಮಹಾದೇವಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಂಗಮ ಸಮಾಜದ ಮಕ್ಕಳಲ್ಲಿ ವೈದಿಕ ಸಂಸ್ಕಾರ ಬೆಳೆಸುವ ಉದ್ದೇಶದಿಂದ ಈ ಶಿಬಿರವನ್ನು ಆಯೋಜಿಸಲಾಗುತ್ತಿದೆ. ಮಕ್ಕಳ ವ್ಯಕ್ತಿತ್ವ ವಿಕಾಸಕ್ಕೆ ಸಂಸ್ಕಾರ ಅತ್ಯಂತ ಅಗತ್ಯವೆಂದು ಹೇಳಿದರು.

ಏ.10ರಿಂದ ಆರಂಭವಾಗುವ ಈ ಶಿಬಿರವು 45 ದಿನಗಳ ಕಾಲ ನಡೆಯಲಿದ್ದು, ಬೇಸಿಗೆ ರಜೆ ಅವಧಿಯಲ್ಲಿ ಉಚಿತವಾಗಿ ತರಬೇತಿ ನೀಡಲಾಗುತ್ತದೆ. ಶಿಬಿರದಲ್ಲಿ ಆಚಾರ-ವಿಚಾರ, ನಡೆ-ನುಡಿ, ಯೋಗ, ಧ್ಯಾನ, ವೈದಿಕ ಶಿವಪೂಜೆ ಸೇರಿದಂತೆ ವಿವಿಧ ವಿಷಯಗಳನ್ನು ಬೋಧಿಸಲಾಗುತ್ತದೆ. ಭಾಗವಹಿಸುವವರಿಗೆ ಉಚಿತ ಊಟ ಹಾಗೂ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ.

ಉದ್ಘಾಟನಾ ಕಾರ್ಯಕ್ರಮವು ಏ.10ರಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದ್ದು, ಶಾಸಕರಾದ ಅಲ್ಲಂ ಪ್ರಭು ಪಾಟೀಲ್, ಲತಾ ಎಂ.ಪಿ. ಪ್ರಕಾಶ ಸೇರಿದಂತೆ ಹಲವು ಗಣ್ಯರು, ಮಠಾಧೀಶರು ಹಾಗೂ ವೀರಶೈವ-ಜಂಗಮ ಸಮಾಜದ ಮುಖಂಡರು ಪಾಲ್ಗೊಳ್ಳಲಿದ್ದಾರೆ.

ಜಂಗಮ ಸಮಾಜದ ಕಾರ್ಯದರ್ಶಿ ಸಿದ್ದಯ್ಯಸ್ವಾಮಿ ಕೋಳಕೂರ ಮಾತನಾಡಿ, ಸಂಸ್ಕಾರ ಶಿಬಿರಗಳು ವ್ಯಕ್ತಿಯ ಜೀವನದಲ್ಲಿ ಉತ್ತಮ ಬದಲಾವಣೆ ತರಲು ಸಹಕಾರಿಯಾಗುತ್ತವೆ. ಪ್ರತಿ ಭಾನುವಾರ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ತಾಲೂಕು ಜಂಗಮ ಸಮಾಜದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವೂ ನಡೆಯಲಿದೆ. ಅಖಿಲ ಭಾರತ ವೀರಶೈವ ಲಿಂಗಾಯತ ಸಮಾಜದ ತಾಲೂಕು ಅಧ್ಯಕ್ಷ ನಾಗರಾಜ ಭಂಕಲಗಿ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಶಿಬಿರದ ಆಯೋಜಕ ಮಂಜುನಾಥ ಶಾಸ್ತ್ರೀ, ಮುಖಂಡರಾದ ಆನಂದ ಪಾಟೀಲ್ ನರಬೋಳಿ, ಮಲ್ಲಿಕಾರ್ಜುನರೆಡ್ಡಿ ಇಜಾರ, ಬಸಯ್ಯ ಸ್ವಾಮಿ ಸಾತನೂರ, ಮಲ್ಲಯ್ಯ ಸ್ವಾಮಿ ವಾಡಿ, ಅನೀಲಕುಮಾರ ವಡ್ಡಡಗಿ, ಶಾಂತಕುಮಾರ ಹತ್ತಿ, ದೊಡ್ಡಯ್ಯ ಸ್ವಾಮಿ ಪತ್ರಿ ಕರದಾಳ, ಬಸಯ್ಯ ಸ್ವಾಮಿ ರಾವೂರ ಇದ್ದರು.

ಶಹಾಬಾದ್ ಗೋಳಾ(ಕೆ) ಗ್ರಾಮದಲ್ಲಿ ಕಳಪೆ ರಸ್ತೆ ಕಾಮಗಾರಿ ಆರೋಪ : ಕ್ರಮಕ್ಕೆ ಒತ್ತಾಯ



ಶಹಾಬಾದ್, ಏ.04-

ತಾಲೂಕಿನ ಗೋಳಾ(ಕೆ) ಗ್ರಾಮದಲ್ಲಿ ನಡೆಯುತ್ತಿರುವ ಸಿಸಿ ರಸ್ತೆ ಕಾಮಗಾರಿ ಅತ್ಯಂತ ಕಳಪೆ ಮಟ್ಟದಲ್ಲಿ ನಡೆಯುತ್ತಿದ್ದು, ತಕ್ಷಣವೇ ಕಾಮಗಾರಿ ಸ್ಥಗಿತಗೊಳಿಸಿ ಗುಣಮಟ್ಟದ ರಸ್ತೆ ನಿರ್ಮಾಣಕ್ಕೆ ಒತ್ತು ನೀಡಬೇಕೆಂದು ಕರವೇ ತಾಲೂಕಾಧ್ಯಕ್ಷ (ನಾರಾಯಣಗೌಡ ಬಣ) ಯಲ್ಲಾಲಿಂಗ ಹೈಯ್ಯಳಕರ್ ಆಗ್ರಹಿಸಿದ್ದಾರೆ.

ಈ ಕುರಿತು ಮಾತನಾಡಿದ ಅವರು, ಹಗಲಿನಲ್ಲಿ ನಡೆಯಬೇಕಾದ ಕಾಮಗಾರಿಯನ್ನು ರಾತ್ರಿ ವೇಳೆ ಯಾರೂ ಇಲ್ಲದ ಸಮಯದಲ್ಲಿ ನಡೆಸಲಾಗುತ್ತಿದೆ. ಇದು ಇಲಾಖೆಯ ನಿಯಮ ಉಲ್ಲಂಘನೆ ಯಾಗಿದ್ದು, ರಸ್ತೆ ನಿರ್ಮಾಣದಲ್ಲಿ ಸಿಮೆಂಟ್ ಪ್ರಮಾಣ ಕಡಿಮೆ ಬಳಕೆ ಮಾಡಿರುವುದರಿಂದ ರಸ್ತೆಯ ಅಂಚುಗಳಲ್ಲಿ ಕೈಯಲ್ಲೇ ಕಂಕರ್ ಹೊರಬರುತ್ತಿದೆ ಎಂದು ಆರೋಪಿಸಿದರು.

ತಾಂತ್ರಿಕ ಮಾನದಂಡಗಳನ್ನು ಪಾಲಿಸದೇ ಕಾಮಗಾರಿ ನಡೆಸಲಾಗುತ್ತಿದೆ. ಕಾಮಗಾರಿ ನಡೆಯುತ್ತಿರುವ ಸ್ಥಳದಲ್ಲಿ ಪರಿಶೀಲನೆ ನಡೆಸಬೇಕಾದ ಅಧಿಕಾರಿಗಳು ಗೈರಾಗಿದ್ದಾರೆ. ಸಂಬಂಧಪಟ್ಟ ಜೆಇಗೆ ಕರೆ ಮಾಡಿದರೂ ಸ್ವೀಕರಿಸುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ರೀತಿಯ ಕಳಪೆ ಕಾಮಗಾರಿಯಿಂದ ಸರ್ಕಾರದ ಹಣ ವ್ಯರ್ಥವಾಗುತ್ತಿದೆ. ಆದ್ದರಿಂದ ತಕ್ಷಣ ಕಾಮಗಾರಿ ನಿಲ್ಲಿಸಿ ತಾಂತ್ರಿಕ ಪರಿಶೀಲನೆ ನಡೆಸಬೇಕು. ಸಂಬಂಧಪಟ್ಟ ಗುತ್ತಿಗೆದಾರರು ಮತ್ತು ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡು ಗುಣಮಟ್ಟದ ರಸ್ತೆ ನಿರ್ಮಿಸಬೇಕು ಎಂದು ಒತ್ತಾಯಿಸಿದರು.

ಈ ಕುರಿತು ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಹೋರಾಟ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.



ಹರಾಳು ಗ್ರಾಮದಲ್ಲಿ ಕರಿಯಮ್ಮ ದೇವಿಯ ಕಳಸಾರೋಹಣ

ವಿಜಯನಗರ, ಏ.04-

ತಾಲೂಕಿನ ಹರಾಳು ಗ್ರಾಮದಲ್ಲಿ ಅಧಿದೇವತೆ ಶ್ರೀ ಕರಿಯಮ್ಮ ದೇವಿಯ ಕಳಸಾರೋಹಣ ಹಾಗೂ ನೂತನ ಕರಿಗಲ್ಲು ಪ್ರತಿಷ್ಠಾಪನೆ ಕಾರ್ಯಕ್ರಮ ಭಕ್ತಿಭಾವದಿಂದ ಜರುಗಿತು. ಈ ಧಾರ್ಮಿಕ ಕಾರ್ಯಕ್ರಮವು ಶ್ರೀ ಉಜ್ಜಯಿನಿ ಸದ್ಧರ್ಮ ಪೀಠದ ಜಗದ್ಗುರುಗಳ ದಿವ್ಯ ಸಾನಿಧ್ಯದಲ್ಲಿ ನೆರವೇರಿತು.

ಈ ಸಂದರ್ಭದಲ್ಲಿ ಲೇಖಕ ಹಾಗೂ ಪತ್ರಕರ್ತರಾದ ಭೀಮಣ್ಣ ಗಜಾಪುರ ಅವರ ''ಅರಣ್ಯ ರಕ್ಷಕ'' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಉಪ್ಪಾರ್ ಕೊಟ್ರೇಶ್ ಸ್ವಾಗತಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಬಳ್ಳಾರಿ-ವಿಜಯನಗರ ಸಂಸದ ಇ.ತುಕಾರಾಂ ಅವರು, ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿ, ಸರ್ಕಾರಿ ಶಾಲೆಗಳಲ್ಲಿ ಸಂಸ್ಕಾರಯುತ ಶಿಕ್ಷಣ ಸಾಧ್ಯವೆಂದು ಅಭಿಪ್ರಾಯಪಟ್ಟರು. ಮತದಾರರೇ ತಮ್ಮ ರಾಜಕೀಯ ಜನ್ಮದಾತರು ಎಂದು ಹೇಳಿದರು.

ವೇದಿಕೆಯಲ್ಲಿ ಮಾಜಿ ಶಾಸಕರು ಹಾಗೂ ಕೆಎಂಎಫ್ ಅಧ್ಯಕ್ಷರಾದ ಭೀಮಾನಾಯ್ಕ್ ಎಸ್., ಬಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಐ.ಎಂ. ದಾರುಕೇಶ್, ಕೃಷಿ ಉತ್ಪನ್ನ ಮಾರುಕಟ್ಟೆ ಅಧ್ಯಕ್ಷ ಎ. ನಂಜಪ್ಪ, ರಾಜ್ಯ ಬೀಜ ನಿಗಮ ನಿರ್ದೇಶಕ ಸಾವಜ್ಜಿ ರಾಜೇಂದ್ರಪ್ರಸಾದ್ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಹಾಲಸ್ವಾಮಿ ಎಂ ನಿರೂಪಿಸಿದರು. ಕೊಟ್ರೇಶ್ ಮಾಳ್ಗಿ ವಂದನಾರ್ಪಣೆ ಸಲ್ಲಿಸಿ ಕಾರ್ಯಕ್ರಮವನ್ನು ಸಮಾಪ್ತಿಗೊಳಿಸಿದರು.

ಸಿಎಂಐಡಿಪಿ ಯೋಜನೆಯಡಿ 125.78 ಲಕ್ಷ ರೂ. ಕಾಮಗಾರಿಗೆ ಶಾಸಕ ಬಿ.ಎಂ.ನಾಗರಾಜ ಅಡಿಗಲ್ಲು



ಸಿರುಗುಪ್ಪ, ಏ.04-

ಕರ್ನಾಟಕ ಸರ್ಕಾರದ 2025-26ನೇ ಸಾಲಿನ ಲೋಕೋಪಯೋಗಿ ಇಲಾಖೆಯ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆ (ಸಿಎಂಐಡಿಪಿ) ಅಡಿಯಲ್ಲಿ ಮಂಜೂರಾದ 125.78 ಲಕ್ಷ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಶಾಸಕ ಬಿ.ಎಂ. ನಾಗರಾಜ ಅವರು ಅಡಿಗಲ್ಲು ನೆರವೇರಿಸಿದರು.

ಸಿರುಗುಪ್ಪ ತಾಲೂಕಿನ ಬಾಗೇವಾಡಿಯಿಂದ ರಾಜ್ಯ ಹೆದ್ದಾರಿ-63 ಸಂಪರ್ಕಿಸುವ ಜಿಲ್ಲಾ ಮುಖ್ಯ ರಸ್ತೆಯ 3.45 ಕಿ.ಮೀ ವ್ಯಾಪ್ತಿಯ ಗಜಗಿನ ಹಾಳ್-ಕರ್ಚಿಗನೂರು ಹತ್ತಿರ ಹಾಗೂ 7.50 ಕಿ.ಮೀ ವ್ಯಾಪ್ತಿಯ ಚಾಣಕನೂರು ಹತ್ತಿರ ಬಾಕ್ಸ್ ಕಲ್ವರ್ಟ್ ನಿರ್ಮಾಣ ಕಾರ್ಯ ಕೈಗೊಳ್ಳಲಾಗುತ್ತಿದೆ. ಈ ಕಾಮಗಾರಿ ಸ್ಥಳೀಯರ ಸಂಚಾರ ಸುಗಮಗೊಳಿಸಲು ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಸಹಕಾರಿಯಾಗಲಿದೆ.

ಈ ಸಂದರ್ಭದಲ್ಲಿ ರೈತ ಸಹಕಾರ ಸೊಸೈಟಿ ಅಧ್ಯಕ್ಷರು ಹಾಗೂ ನಗರಸಭೆ ಮಾಜಿ ಅಧ್ಯಕ್ಷ ನಾಂಚರಯ್ಯ, ಆರ್. ಪಂಪನಗೌಡ, ಟಿ. ದೊಡ್ಡ ವೀರೇಶಗೌಡ, ಬಿ. ಬಸವನಗೌಡ (ಕರ್ಚಿಗನೂರು), ಎಂ. ಬಗ್ಗೂರುಗೌಡ, ಯು. ಬಗ್ಗೂರುಗೌಡ (ಚಾಣಕನೂರು), ಚೂಡಿ ಈರಯ್ಯ, ವಡ್ಡರ ಚೂಡಿ ರಮೇಶ್, ಹನುಮಂತಪ್ಪ, ಚೆನ್ನಯ್ಯಸ್ವಾಮಿ, ಗೋಪಾಲಪ್ಪ, ನಗರಸಭೆ ಮಾಜಿ ಸದಸ್ಯರಾದ ಅನ್ಸಾರಿ ಇಸಾಕ್, ಹೆಚ್. ಗಣೇಶ್, ಬಿ. ವೆಂಕಟೇಶ್, ಜಾಜಿ ರಾಮಪ್ಪ, ಬಿಎಂ ಮಣಿಕಂಠ ನಾಯಕ, ಪವನ್ ದೇಸಾಯಿ, ಪಿಡಬ್ಲ್ಯುಡಿ ಇಂಜಿನಿಯರ್‌ಗಳಾದ ಗಂಗಪ್ಪ, ರಾಕೇಶ್, ಮೊಹಮ್ಮದ್ ಪಾಷಾ, ಗ್ರಾಮ ಪಂಚಾಯತ್ ಪಿಡಿಓ ಶಾಕಿರ್ ಸಾಬ್, ಸ್ಥಳೀಯ ಮುಖಂಡರು, ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಶಹಾಬಾದ್ ಹೊನಗುಂಟಾ ಗ್ರಾಮದ ಗ್ರಾಮಲೇಖಪಾಲಕರನ್ನು ವರ್ಗಾವಣೆ ಮಾಡಲು ಒತ್ತಾಯ



ಶಹಾಬಾದ್, ಏ.04-

ತಾಲೂಕಿನ ಹೊನಗುಂಟಾ ಗ್ರಾಮದ ಗ್ರಾಮಲೇಖಪಾಲಕ ಗಣಮಂತರಾವ ಪಾಟೀಲ ಅವರು ಸರಕಾರದ ನಿಯಮಗಳನ್ನು ಗಾಳಿಗೆ ತೂರಿ ಕರ್ತವ್ಯ ನಿರ್ವಹಿಸುತ್ತಿದ್ದು, ತಮಗೆ ಬೇಕಾದಂತೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಆರೋಪಿಸಿ ಅವರನ್ನು ತಾಲೂಕಿನಿಂದ ವರ್ಗಾವಣೆ ಮಾಡಬೇಕೆಂದು ಕರವೇ (ಪ್ರವೀಣಶೆಟ್ಟಿ ಬಣ) ತಾಲೂಕಾಧ್ಯಕ್ಷ ವಿಶ್ವರಾಜ ಫಿರೋಜಾಬಾದ ತಹಸೀಲ್ದಾರ ಮುಖಾಂತರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಮನವಿಯಲ್ಲಿ, ಗ್ರಾಮದಲ್ಲಿ ರೈತರಿಗೆ ಸರಿಯಾದ ಮಾಹಿತಿ ನೀಡದೇ ಹಾಗೂ ಆಸ್ತಿ ವರ್ಗಾವಣೆಯ ಸಂದರ್ಭಗಳಲ್ಲಿ ಕಾನೂನು ಬಾಹಿರವಾಗಿ ಕ್ರಮ ಕೈಗೊಳ್ಳಲಾಗಿದೆ ಎಂದು ಆರೋಪಿಸಲಾಗಿದೆ. ಆಸ್ತಿ ವರ್ಗಾವಣೆಗೆ ಗ್ರಾಮದಲ್ಲಿನ ನಾಲ್ಕು ಪಂಚರ ಸಾಕ್ಷಿ ಅಗತ್ಯವಿದ್ದರೂ, ಬೇರೆ ಊರಿನವರ ಸಾಕ್ಷಿ ಪಡೆದು ವರ್ಗಾವಣೆ ಮಾಡಲಾಗಿದೆ ಎನ್ನಲಾಗಿದೆ. ಜೊತೆಗೆ ಸಂಬಂಧಪಟ್ಟವರಿಗೆ ಸೂಕ್ತ ಮಾಹಿತಿ ನೀಡದೆ ಹಣದ ಆಸೆಗಾಗಿ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ದೂರಲಾಗಿದೆ.

ಇದೇ ವೇಳೆ, 2024-25 ಮತ್ತು 2025-26ರಲ್ಲಿ ಉಂಟಾದ ಪ್ರವಾಹದಿಂದ ಗ್ರಾಮದಲ್ಲಿ ಮನೆಗಳು ಮತ್ತು ಬೆಳೆಗಳಿಗೆ ಭಾರಿ ಹಾನಿಯಾಗಿದ್ದರೂ, ನಿಜವಾಗಿ ಹಾನಿಗೊಳಗಾದವರಿಗೆ ಪರಿಹಾರ ನೀಡದೇ, ಹಾನಿಯೇ ಆಗದ ಕೆಲವರಿಗೆ ಪರಿಹಾರ ಒದಗಿಸಿರುವ ಆರೋಪವೂ ಕೇಳಿಬಂದಿದೆ.

ಗಂಡ ಮೃತಪಟ್ಟ ನಂತರ ಆಸ್ತಿ ಹೆಂಡತಿಗೆ ವರ್ಗಾವಣೆ ಮಾಡಬೇಕಾದಲ್ಲಿ ಇತರರಿಗೆ ವರ್ಗಾವಣೆ ಮಾಡಿರುವುದು ಕೂಡ ಗಂಭೀರ ನಿರ್ಲಕ್ಷ್ಯಕ್ಕೆ ಉದಾಹರಣೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ. ಈ ವಿಷಯವನ್ನು ತಹಶೀಲ್ದಾರ್ ನೀಲಪ್ರಭ ಬಬಲಾದ ಅವರ ಗಮನಕ್ಕೂ ತರಲಾಗಿದೆ ಎಂದು ತಿಳಿಸಲಾಗಿದೆ.

ಆದ್ದರಿಂದ ಸಂಬಂಧಪಟ್ಟ ಗ್ರಾಮಲೇಖಪಾಲಕನ ವಿರುದ್ಧ ತಕ್ಷಣ ಕ್ರಮ ಕೈಗೊಂಡು ವರ್ಗಾವಣೆ ಮಾಡಬೇಕು. ಇಲ್ಲವಾದರೆ ತಹಶೀಲ್ದಾರ್ ಕಚೇರಿ ಮುಂದೆ ಹೋರಾಟ ನಡೆಸಲಾಗುವುದು ಎಂದು ಕರವೇ ಮುಖಂಡರು ಎಚ್ಚರಿಸಿದ್ದಾರೆ.

ಕರವೇ ಉಪಾಧ್ಯಕ್ಷ ಲಿಂಗರಾಜ ಕಮರಡಗಿ, ಶರಣು ತಳವಾರ, ದತ್ತು ಹೀರಾಪೂರ, ಪ್ರಭು ಮಂಗಳೂರ, ಭೂತಾಳ ಪೂಜಾರಿ ಇತರರು ಇದ್ದರು.

ಆಳಂದ ಸಿಯುಕೆಯಲ್ಲಿ ದೃಶ್ಯಕಲಾ ಪ್ರದರ್ಶನ ಉದ್ಘಾಟನೆ ಚಿತ್ರಕಲೆ ಜಾಗತಿಕ ಭಾಷೆ : ಕುಲಸಚಿವ ಪ್ರೊ.ಬಿರಾದಾರ್



ಆಳಂದ, ಏ.04-

''ಚಿತ್ರಕಲೆ ಭಾವನೆಗಳು ಮತ್ತು ಅನುಭವಗಳ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮವಾಗಿದ್ದು, ಅದು ಜಾಗತಿಕ ಭಾಷೆಯಾಗಿದೆ'' ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ಆರ್.ಆರ್.ಬಿರಾದಾರ್ ಹೇಳಿದರು. ತಾಲೂಕಿನ ಕಡಗಂಚಿ ಬಳಿಯ ಸಿಯುಕೆಯ ಸಂಗೀತ ಮತ್ತು ಲಲಿತಕಲೆಗಳ ವಿಭಾಗದಲ್ಲಿ ಏರ್ಪಡಿಸಲಾದ ದೃಶ್ಯಕಲಾ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಲಾಕೃತಿಗಳನ್ನು ವೀಕ್ಷಿಸಿ ವಿದ್ಯಾರ್ಥಿಗಳ ಪ್ರತಿಭೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

''ಯಾವುದೇ ಕಲೆ ಮನುಷ್ಯನಿಗೆ ಆನಂದ ಮತ್ತು ಸಂಸ್ಕಾರ ನೀಡುವುದಲ್ಲದೆ, ಮನಸ್ಸಿನ ಒತ್ತಡವನ್ನು ಕಡಿಮೆ ಮಾಡಿ ಆರೋಗ್ಯವನ್ನೂ ವೃದ್ಧಿಸುತ್ತದೆ. ಕಲೆ ಜನರನ್ನು ಒಗ್ಗೂಡಿಸುವ ಶಕ್ತಿ ಹೊಂದಿದ್ದು, ಪ್ರತಿಯೊಬ್ಬರೂ ಕಲೆಗಳಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕು'' ಎಂದು ಹೇಳಿದರು.

ವಿದ್ಯಾರ್ಥಿಗಳು ರಚಿಸಿದ ಕಲಾಕೃತಿಗಳಲ್ಲಿ ಸಾಮಾಜಿಕ ಜಾಗೃತಿ, ಪರಿಸರ ಕಾಳಜಿ ಮುಂತಾದ ಅಂಶಗಳು ಸ್ಪಷ್ಟವಾಗಿ ಕಾಣುತ್ತಿದ್ದು, ಪ್ರಕೃತಿ ಹಾಗೂ ಪ್ರಾಣಿ-ಪಕ್ಷಿಗಳ ಬಗ್ಗೆ ಪ್ರೀತಿ ಮೂಡಿಸುವ ಸಂದೇಶ ನೀಡುತ್ತವೆ ಎಂದು ಅವರು ಅಭಿಪ್ರಾಯಪಟ್ಟರು. ದೇಶ, ಭಾಷೆ ಮತ್ತು ಸಂಸ್ಕೃತಿಗಳ ಅರಿವು ಮೂಡಿಸುವ ಕಲಾಕೃತಿಗಳನ್ನು ಸಹ ಆಸ್ವಾದಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಗ್ರಂಥಾಲಯದ ಮುಖ್ಯಸ್ಥ ಡಾ.ಪರಶುರಾಮ ಕಟ್ಟಿಮನಿ ಮಾತನಾಡಿ, ''ವಿದ್ಯಾರ್ಥಿಗಳ ಕಲಾಕೃತಿಗಳಲ್ಲಿ ಸೃಜನಶೀಲತೆ ಸ್ಪಷ್ಟವಾಗಿ ಗೋಚರಿಸುತ್ತಿದ್ದು, ಭವಿಷ್ಯದಲ್ಲಿ ಅವರು ದೇಶದ ಸಾಂಸ್ಕೃತಿಕ ಆಸ್ತಿಯಾಗುವ ಎಲ್ಲಾ ಲಕ್ಷಣಗಳಿವೆ'' ಎಂದು ಹೇಳಿದರು.

ವಿಭಾಗದ ಮುಖ್ಯಸ್ಥ ಹಾಗೂ ಮಾನವಿಕ ಮತ್ತು ಭಾಷಾ ನಿಕಾಯದ ಡೀನ್ ಪ್ರೊ. ವಿಕ್ರಮ ವಿಸಾಜಿ, ಪ್ರದರ್ಶನದ ಸಂಯೋಜಕರಾದ ಡಾ. ಶಿವಾನಂದ ಬಂಟನೂರ ಮಾತನಾಡಿದರು.

ಕಾರ್ಯಕ್ರಮದಲ್ಲಿ ವಿವಿಧ ವಿಭಾಗಗಳ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಶಿವಾನಿ ರಾವತ್ ಮತ್ತು ಶ್ವೇತಾ ದೂದಿ ಸ್ವಾಗತ ಗೀತೆ ಹಾಡಿದರು. ವಿನಯಕುಮಾರ್ ಆರ್. ಕಾರ್ಯಕ್ರಮ ನಿರೂಪಿಸಿ, ಸಂಶೋಧನಾ ವಿದ್ಯಾರ್ಥಿ ಪ್ರಶಾಂತ ಕುವರ್ ವಂದಿಸಿದರು.



ಅಫಜಲಪುರ ಣ ಜನಗಣತಿ; ಗಣತಿದಾರರಿಗೆ ಮೂರು ಹಂತಗಳಲ್ಲಿ ತರಬೇತಿ ನೀಡಲಾಗುವುದು : ಫಕ್ರೂದ್ದಿನ್

ಅಫಜಲಪುರ, ಏ.04-

2027ರ ಜನಗಣತಿಸಂಪೂರ್ಣ ಡಿಜಿಟಲ್ ಆಧಾರಿತ ಪ್ರಕ್ರಿಯೆಯಾಗಿದ್ದು, ದೋಷರಹಿತ ಹಾಗೂ ಪಾರದರ್ಶಕ ಮಾಹಿತಿ ಸಂಗ್ರಹಣೆಗೆ ಗಣತಿದಾರರಿಗೆ ಮೂರು ಹಂತಗಳಲ್ಲಿ ತರಬೇತಿ ನೀಡಲಾಗುವುದು ಎಂದು ಪುರಸಭೆ ಮುಖ್ಯಾಧಿಕಾರಿ ಫಕ್ರೂದ್ದಿನ್ ಹೇಳಿದರು.

ಪಟ್ಟಣದ ಶ್ರೀ ನಾಗರಾಜ ಪದಕಿ ಶಿಕ್ಷಣ ಸಂಸ್ಥೆಯಲ್ಲಿ ಪುರಸಭೆ ವತಿಯಿಂದ ಶುಕ್ರವಾರ ಗಣತಿದಾರರು ಹಾಗೂ ಮೇಲ್ವಿಚಾರಕರಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಸಾರ್ವಜನಿಕರಿಗೆ ಆನ್?ಲೈನ್ ಮೂಲಕ ಮಾಹಿತಿ ಸಲ್ಲಿಸಲು ಟಸ್ವಯಂಗಣತಿಟ ವ್ಯವಸ್ಥೆಯನ್ನು ಪರಿಚಯಿಸಲಾಗುತ್ತಿದ್ದು, ಇದರಿಂದ ಪ್ರಕ್ರಿಯೆ ಸುಲಭ ಹಾಗೂ ವೇಗವಾಗಲಿದೆ ಎಂದು ತಿಳಿಸಿದರು.

ಪುರಸಭೆ ವ್ಯಾಪ್ತಿಯಲ್ಲಿ ಒಟ್ಟು 56 ಗಣತಿದಾರರು ಹಾಗೂ 10 ಮೇಲ್ವಿಚಾರಕರನ್ನು ನೇಮಿಸಲಾಗಿದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಎಂ.ಜಿ. ಬಿರಾದಾರ, ಸುಮನ್ ಶಂಕರರಾವ ಸೇರಿದಂತೆ ಪುರಸಭೆ ಸಿಬ್ಬಂದಿ ಹಾಗೂ ತರಬೇತಿದಾರರು ಉಪಸ್ಥಿತರಿದ್ದರು.

ಇಂಜಿನಿಯರ್ ಮೇಲೆ ಹಲ್ಲೆ ಆರೋಪ : ಆರೋಪಿಗಳ ಬಂಧನಕ್ಕೆ ಬಿಜೆಪಿ ಆಗ್ರಹ

ಬಳ್ಳಾರಿ , ಏ.04-

ಬಳ್ಳಾರಿ ಮಹಾನಗರ ಪಾಲಿಕೆಯ ಇಂಜಿನಿಯರ್ ಜಿ.ಎಂ. ವೀರೇಶ್ ಅವರ ಮೇಲಿನ ಹಲ್ಲೆ ಪ್ರಕರಣವನ್ನು ಖಂಡಿಸಿ ಪಾಲಿಕೆ ಸಿಬ್ಬಂದಿ ಹಾಗೂ ಅಧಿಕಾರಿಗಳು ಆರಂಭಿಸಿದ ಪ್ರತಿಭಟನೆಗೆ ಬೆಂಬಲ ಸೂಚಿಸಿದ ವಿಧಾನಪರಿಷತ್ ಸದಸ್ಯ ವೈ.ಎಂ. ಸತೀಶ್, ಸರ್ಕಾರಿ ನೌಕರರು ಆತ್ಮಸ್ಥೈರ್ಯ ಕಳೆದುಕೊಳ್ಳದೇ ಕರ್ತವ್ಯ ನಿರ್ವಹಿಸಬೇಕು ಎಂದು ಹೇಳಿದರು.

ಪಾಲಿಕೆ ಕಚೇರಿ ಮುಂದೆ ಶುಕ್ರವಾರ ಸಂಜೆ ಆರಂಭವಾದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ನಗರದಲ್ಲಿ ಪದೇ ಪದೇ ಗಲಭೆಗಳು ಮತ್ತು ವಿವಾದಗಳು ನಡೆಯುತ್ತಿರುವುದು ವಿಷಾದನೀಯ. ಇಂತಹ



ಘಟನೆಗಳು ಬಳ್ಳಾರಿ ನಗರದ ಮಾನಕ್ಕೆ ಧಕ್ಕೆಯಾಗುತ್ತಿವೆ. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳನ್ನು ಆಡಳಿತ ಪಕ್ಷದ ಜನಪ್ರತಿನಿಧಿಗಳು ತಡೆಗಟ್ಟಬೇಕು ಎಂದು ಹೇಳಿದರು.

ಇಂಜಿನಿಯರ್ ಜಿ.ಎಂ. ವೀರೇಶ್ ಮೇಲೆ ಹಲ್ಲೆ ನಡೆಸಿದ ಆರೋಪದಡಿ ಕಾಂಗ್ರೆಸ್ ಕಾರ್ಪೊರೇಟರ್ ವಿ.ಕುಬೇರ ಅವರನ್ನು ತಕ್ಷಣ ಬಂಧಿಸಬೇಕು. ಇಲ್ಲವಾದರೆ ಬಿಜೆಪಿ ಹಂತ ಹಂತವಾಗಿ ಪ್ರತಿಭಟನೆ ಕೈಗೊಳ್ಳಲಿದೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸಿಬ್ಬಂದಿ, ಅಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಎನ್‌ಟಿಆರ್ ಪುತ್ಥಳಿ ಲೋಕಾರ್ಪಣೆಗೊಳಿಸಿ ಎಚ್.ಡಿ.ಕುಮಾರಸ್ವಾಮಿ

ಕರ್ನಾಟಕ ತಾಯಿ ಮಮತೆಯಲ್ಲಿ ಆಂಧ್ರ ಜನರ ಬದುಕು

ವೈಜಾಕ್ ಸ್ಟೀಲ್ ಪ್ಲಾಂಟ್ ಅನ್ನು ಕೇಂದ್ರದಲ್ಲಿ ಕುಮಾರಸ್ವಾಮಿ ಸಚಿವರಾದ ನಂತರ ಪುನರಾರಂಭಿಸಲು ವಿಶೇಷ ಕಾಳಜಿ ವಹಿಸಿದ್ದಾರೆ ಎಂದು ಅವರು ಪ್ರಶಂಸಿಸಿದರು. ಗ್ರೀನ್‌ಫೀಲ್ಡ್ ಹೂಡಿಕೆಗಳು ಆಂಧ್ರಪ್ರದೇಶಕ್ಕೆ ಬರಲು ಕುಮಾರಸ್ವಾಮಿ ಕಾರಣ ಎಂದು ಹೇಳಿದರು.

ಮೇ.17 ರಂದು ಜಿಲ್ಲಾ ಮಟ್ಟದ ವಾಲ್ಮೀಕಿ ಜಾಗೃತಿ ಸಮಾವೇಶ - ಡಾ.ಶ್ರೀ ಪ್ರಸನ್ನಾನಂದ ಶ್ರೀಗಳು

ನಾಗೇಶ್ ನವಲಕಲ್, ವಜ್ರದಯ್ಯ ಮೂರ್ಖೆಗುಡ್ಡ, ಹನುಮಂತರಾಯ ನಾಯಕ್ ಬಾಗಲವಾಡ, ಬಸವರಾಜ್ ಮಲ್ಲಟ, ಸಾಬಣ್ಣ ಹುಣಚೇಡ, ಶಿವು ಮರಾಠ,ದೇವರಾಜ್ ದೇವತಗಲ್, ಇನ್ನಿತರರು ಇದ್ದರು.

ದಲಿತ ಚಳುವಳಿಯ ಮೂಲಕ ಹೋರಾಟದ ಜೀವನ ಪ್ರಾರಂಭಿಸಿದ ಡಿಂಗ್ರಿ ನರಸಪ್ಪ

ರಾಯಚೂರು,ಏ.04-

ದಲಿತ ಚಳುವಳಿಯ ಮೂಲಕ ಹೋರಾಟದ ಜೀವನ ಪ್ರಾರಂಭಿಸಿದ ಡಿಂಗ್ರಿ ನರಸಪ್ಪ ಇವರು ತಮ್ಮ ಕಂಚಿನ ಕಂಠದ ಹಾಡುಗಾರಿಕೆ ಹಾಗೂ ತಮಟೆ ಬಾರಿಸುವಿಕೆ ದಲಿತ ಸಮುದಾಯವು ಶೋಷಣೆಯ ವಿರುದ್ಧ ಸೆಟೆದು ನಿಲ್ಲಲು ಪ್ರೇರಿಪಿಸದವು.

ರಾಯಚೂರು ಜಿಲ್ಲೆಯ ಸಾಕ್ಷರತಾ ಜನಾಂದೋಲನದಲ್ಲಿ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಪರಿಶಿಷ್ಟ ಜಾತಿಯಲ್ಲಿನ ಒಳ ಮೀಸಲಾತಿಗಾಗಿ ನಡೆದ ಸುದೀರ್ಘ ಚಳುವಳಿಯಲ್ಲಿ ಮಾದಿಗರ ನೋವು ನಲಿವುಗಳ ಜೊತೆಗೆ ಅವರಿಗೆ ಆದ ಅನ್ಯಾಯವನ್ನು ವಿವರಿಸಲು ಹಳ್ಳಿ ಹಳ್ಳಿಗಳಲ್ಲಿ ಸಂಚರಿಸಿ, ಅನೇಕ ಹಾಡುಗಳನ್ನು ಹಾಡಿದ್ದಾರೆ. ಅಲ್ಲದೇ ಸಾಮಾಜಿಕ ಪಿಡುಗುಗಳಾದ ಬಾಲ್ಯ ವಿವಾಹ ಬಾಲಕಾರ್ಮಿಕತೆ, ಜಾತಿ ತಾರತಮ್ಯ, ಶಿಕ್ಷಣ ಜಾಗೃತಿ ಹಾಗೂ ಮಹಿಳೆಯರ ಮತ್ತು ಮಕ್ಕಳ ರಕ್ಷಣೆಗಾಗಿ ಇರುವ ಅನೇಕ ಕಾಯ್ದೆ ಕಾನೂನುಗಳ ಕುರಿತು ತನ್ನ ಕಲಾ ತಂಡದ ಮೂಲಕ ಬೀದಿ ನಾಟಕ ಹಾಗೂ ಹಾಡಿಗಳ ಮೂಲಕ ಜಿಲ್ಲೆಯ ಪ್ರತಿ ಹಳ್ಳಿಯಲ್ಲೂ ಜಾಗೃತಿ ಮೂಡಿಸಿದ್ದಾರೆ.

ಇಂತಹ ರಾಯಚೂರು ಜಿಲ್ಲೆಯ ಹಿರಿಯ ಜನಪದ ಕಲಾವಿದರಾದ ಡಿಂಗ್ರಿ ನರಸಪ್ಪ ಇವರಿಗೆ ಕರ್ನಾಟಕ ರಾಜ್ಯ ಸರ್ಕಾರವು 2026 ನೇ ಸಾಲಿನ ಡಾ. ಬಾಬು ಜಗಜೀವನ್ ರಾಮ್ ಪ್ರಶಸ್ತಿ ಘೋಷಿಸಿರುವುದು. ರಾಯಚೂರು ಜಿಲ್ಲೆಗೆ ಸಂದ ಗೌರವವಾಗಿದೆ ಎಂದು ಮಾದಿಗ ಮೀಸಲಾತಿ ಹೋರಾಟ ಸಮಿತಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾದ ಕೆ ಪಿ ಅನಿಲ್ ಕುಮಾರ್ ಅವರು ಅಭಿಪ್ರಾಯ ಪಟ್ಟಿದ್ದಾರೆ.



ವಾಣಿಜ್ಯ ಅಡುಗೆ ಅನಿಲ ಮತ್ತು ಜೀವ ರಕ್ಷಕ ಔಷಧಿಗಳ ಬೆಲೆ ಏರಿಕೆಗೆ ಎಸ್‌ಯುಸಿಐ (ಕಮ್ಯುನಿಸ್ಟ್) ತೀವ್ರ ವಿರೋಧ

ಇದು ಸಂಕಷ್ಟದಲ್ಲಿರುವ ಜನರಿಗೆ ದೊಡ್ಡ ಹೊಡೆತ ನೀಡಲಿದೆ ಎಂದು ತಿಳಿಸಿದ್ದಾರೆ

ಬಹುತೇಕ ಎಲ್ಲಾ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯ ಹೊರೆಯಿಂದ ಸಾಮಾನ್ಯ ಜನರು ತತ್ತರಿಸುತ್ತಿರುವಾಗ, ಈ ಹೆಚ್ಚಳವು ಅವರನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಲಿದೆ. ಇದು ಬಿಜೆಪಿ ಸರ್ಕಾರದ ಜನವಿರೋಧಿ ಗುಣವನ್ನು ಮತ್ತೊಮ್ಮೆ ಬಯಲಿಗೆಳೆದಿದೆ. ಈ ಬೆಲೆ ಏರಿಕೆಯನ್ನು ಹಿಂಪಡೆಯುವತೆ ಸರ್ಕಾರವನ್ನು ಒತ್ತಾಯಿಸಲು ಜನರು ಮುಂದೆ ಬಂದು ತಮ್ಮ ಪ್ರತಿಭಟನೆಯ ಧ್ವನಿಯನ್ನು ಎತ್ತಬೇಕೆಂದು ಎಸ್‌ಯುಸಿಐ(ಸಿ) ವಿಜಯಪುರ ಜಿಲ್ಲಾ ಸಮಿತಿಯು ಕರೆ ನೀಡುತ್ತದೆ ಎಂದು ಭಗವಾನರೆಡ್ಡಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಬಿಲ್ಲೆ ಆಟ ಆಡಿಸಿ ಹಳ್ಳಿಗರಿಗೆ ಮೋಸ

ದೇವದುರ್ಗ,ಏ.04-

ಎಪಿಎಂಸಿ ಮಾರುಕಟ್ಟೆಯಲ್ಲಿ ಪ್ರತಿ ಶನಿವಾರ ಆಡು-ಕುರಿ - ಕೋಳಿ ಸಂತೆ ನಡೆಯುತ್ತದೆ ಅನೇಕರು ಹಳ್ಳಿಗಳಿಂದ ತಾವುಗಳು ಸಾಕಿದಂತ ಕುರಿ ಮರಿಗಳನ್ನು ಮಾರುವುದಕ್ಕೆ ದೇವದುರ್ಗ ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಅನೇಕ ರೈತರು ತಮ್ಮ ವೈಯಕ್ತಿಕ ಸಮಸ್ಯೆ ಗೋಸ್ಕರ ತಾವು ಸಾಕಿದಂತ ಕುರಿಮರಿಗಳನ್ನು ಮಾರಲು ಬರುತ್ತಾರೆ ಇದನ್ನು ಗಮನಿಸಿದ ದಂಧೆ ಕೋರರ ಜಾಲ

ಇದನ್ನೇ ಬಂಡವಾಳ ಮಾಡಿಕೊಂಡಿರುವ ಅಂತ ಒಂದಿಷ್ಟು ದಂದೆ ಕೋರರ ದಂಡು ಹೊಂಚು ಹಾಕಿ ರೈತರಿಗೆ ಮೋಸ ಮಾಡಲೇ ಬೇಕೆಂದು ಹೊಂಚು ಹಾಕಿ

ಬಿಲ್ಲೆ ಅನ್ನುವ ಆಟವನ್ನು ಆಡಿಸಿ

ಇದಕ್ಕಾಗಿ ತಮ್ಮದೇ ಆದ ತಂಡವನ್ನು ರಚನೆ ಮಾಡಿಕೊಂಡು ಹೊಂಚು ಹಾಕಿ ರೈತರಿಗೆ ಮೋಸ ಮಾಡುತ್ತಿರುವುದನ್ನು ಜಾಲವನ್ನು ಗಮನಿಸಿದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಚುನಪ್ಪ ಪೂಜೇರಿ ಬಣ ತಾಲೂಕ್ ಅಧ್ಯಕ್ಷರಾಗಿರುವ ಹನುಮಂತರಾಯ ದೊರೆ, ಸಿಪ್ಪತ್ಗೇರಾ ಆಟ ಆಡುವುದನ್ನು ತಡೆ ಹಿಡಿದು ಪೊಲೀಸ್ ಇಲಾಖೆಗೆ ಮಾಹಿತಿ ನೀಡಿ ಪೊಲೀಸ್ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಿ ದಂಧೆ ಕೋರರನ್ನು ಅರೆಸ್ಟ್ ಮಾಡುವಂತೆ ಒತ್ತಾಯಿಸಿದರು.

ಈ ಧಂದೆ ಕೋರರು ಮುಂದಿನ ದಿನಗಳಲ್ಲಿ ಏನಾದರೂ ಸಂತೆ ಮಾರ್ಕೆಟಿನಲ್ಲಿ ರೈತರಿಗೆ ಮೋಸ ಮಾಡುವಂತಹ ಬಿಲ್ಲೆ ಅನ್ನೊ ಆಟವನ್ನು ಮುಂದಿನ ದಿನಗಳಲ್ಲಿ ಏನಾದರೂ ಆಡಿಸಿದರೆ ಇದಕ್ಕೆ ನೇರ ಹೊಣೆ ಪೊಲೀಸ್ ಇಲಾಖೆ ಹೊರಬೇಕಾಗುತ್ತದೆ ಎಂದು ದೂರಿದರು

ಬಡಜನರ ಜೀವ ಹಿಂಡತಿರುವಂತ ಅಮಾಯಕ ರೈತರ ಮೇಲೆ

ಹಾಡು ಹಗಲೇ ದರೋಡೆ ಮಾಡುತ್ತಿರುವ ಅಂತ ಬಿಲ್ಲೆ ಅನ್ನುವ ಆಟವನ್ನು ಆಡಿಸುವ ದಂಧೆ ಕೋರರನ್ನು ಮಟ್ಟ ಹಾಕಿ ರೈತರ ರಕ್ಷಣೆಗೆ ಅಧಿಕಾರಗಳು ಸ್ಪಂದಿಸಬೇಕೆಂದು ಎಂದು ರೈತ ಸಂಘದ ಅಧ್ಯಕ್ಷ ಹನುಮಂತರಾಯ ದೊರೆ ಸಿಪ್ಪತ್ತಿಗೆರ ಆಗ್ರಹಿಸಿದರು.

ಜನಗಣತಿದಾರರ ತರಬೇತಿ ಕಾರ್ಯಕ್ರಮ

ಮಾನ್ವಿ,ಏ.03-

ಪಟ್ಟಣದ ಕಾಕತೀಯ ವಿದ್ಯಾಸಂಸ್ಥೆಯಲ್ಲಿ ನಡೆದ ಜನಗಣತಿದಾರರ ತರಬೇತಿ ಕಾರ್ಯಕ್ರಮಕ್ಕೆ ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು ದೇಶದ ಅಭಿವೃದ್ಧಿಗೆ ವಿವಿಧ ಯೋಜನೆ ಗಳನ್ನು ರೂಪಿಸುವುದಕ್ಕಾಗಿ ಪ್ರತಿ 10 ವರ್ಷಗಳಿಗೆ ಒಮ್ಮೆ ಜನಗಣತಿಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಡೆಸುತ್ತವೆ. ಆದ್ದರಿಂದ ಜನಗಣತಿಯಲ್ಲಿ ಭಾಗವಹಿಸುವ ಗಣತಿದಾರರು ನಿಖರವಾದ ಅಂಶಗಳನ್ನು ದಾಖಲಿಸುವ ಮೂಲಕ ಜನಗಣತಿಯನ್ನು ಯಶಸ್ವಿಗೊಳಿಸುವಂತೆ ಕೋರಿದರು.

ಮಾನ್ವಿ ತಾಲೂಕು ಗ್ರಾಮೀಣ ಭಾಗದ ಚಾರ್ಜ್ ಅಧಿಕಾರಿ ಹಾಗೂ ತಹಶಿಲ್ದಾರ್ ಭೀಮರಾಯ ಬಿ ರಾಮಸಮುದ್ರ, ಮಾತನಾಡಿ ನಮ್ಮ ಗಣತಿ ನಮ್ಮ ಅಭಿವೃದ್ಧಿ ಘೋಷ ವಾಕ್ಯದೊಂದಿಗೆ ಸ್ವಯಂ ಗಣತಿಯನ್ನು ಏ.1ರಿಂದ ಪ್ರಾರಂಭಿಸಲಾಗಿದ್ದು ಸಾರ್ವಜನಿಕರು ತಮ್ಮ 34 ಅಂಶಗಳ ಮಾಹಿತಿಯನ್ನು ಸ್ವಯಂ ತಮ್ಮ ಮೊಬೈಲ್ ಮೂಲಕ ದಾಖಲಿಸಿಕೊಳ್ಳಬಹುದಾಗಿದೆ, ಮಾನ್ವಿ ತಾಲೂಕಿನಲ್ಲಿ ಜನಗಣತಿದಾರರಿಗೆ ಏ.3,4 ಹಾಗೂ 10 ರಂದು ತರಬೇತಿ ನೀಡಲಾಗುವುದು.

ಜನಗಣತಿದಾರರು ಏ.16ರಿಂದ ಮೇ.15 ರವರಿಗೆ ತಾಲೂಕಿನ ಎಲ್ಲಾ 78 ಗ್ರಾಮಗಳಲ್ಲಿ ಹಾಗೂ ಮಾನ್ವಿ ಪಟ್ಟಣದಲ್ಲಿ ಮನೆ ಮನೆಗೆ ತೆರಳಿ ಗಣತಿ ನಡೆಸಲಿದ್ದಾರೆ. ಮಾನ್ವಿ ಪಟ್ಟಣದ ಜನಗಣತಿಯ ಚಾರ್ಜ ಅಧಿಕಾರಿಯಾಗಿ ಪುರಸಭೆ ಮುಖ್ಯಾಧಿಕಾರಿ ಪರಶುರಾಮ ದೇವಮಾನೆ ಕಾರ್ಯನಿರ್ವಹಿಸಲಿದ್ದಾರೆ.

ಗ್ರಾಮೀಣ ಭಾಗದಲ್ಲಿ 247 ಗಣತಿದಾರರು ಹಾಗೂ 25 ಕಾಯ್ದಿರಿಸಿದ ಗಣತಿದಾರರು, 43 ಸೂಪರ್ ವೈಸ,ರ5 ಕಾಯ್ದಿರಿಸಿದ ಸೂಪರ್ ವೈಸರ್ ,5 ಮಾಸ್ಟರ್ ತರಬೇತಿದಾರರು, ಮಾನ್ವಿ ಪಟ್ಟಣದಲ್ಲಿ 87 ಗಣತಿದಾರರು ಹಾಗೂ 8 ಕಾಯ್ದಿರಿಸಿದ ಗಣತಿದಾರರು, 14 ಸೂಪರ್ ವೈಸ,ರ2 ಕಾಯ್ದಿರಿಸಿದ ಸೂಪರ್ ವೈಸರ್ ,5 ಮಾಸ್ಟರ್ ತರಬೇತಿದಾರರು ಜನಗಣತಿಯ ಕಾರ್ಯದಲ್ಲಿ ಭಾಗವಹಿಸಲಿದ್ದಾರೆ.

ಉತ್ತಮ ತರಬೇತಿ ಪಡೆದ ಗಣತಿದಾರರಿಗೆ ಹಾಗೂ ಉತ್ತಮ ಗಣತಿ ಕಾರ್ಯ ನಿರ್ವಹಿಸಿದ ಗಣತಿದಾರರಿಗೆ ಮೇಲ್ವಿಚಾರಕರಿಗೆ ಸನ್ಮಾನಿಸಿ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು ಎಂದು ತಿಳಿಸಿದರು.

ಇದೇ ವೇಳೆ ಜನಗಣತಿಯಲ್ಲಿ ಭಾಗವಹಿಸಿಸುವ ಗಣತಿದಾರರಿಗೆ ಗಣತಿ ಕಿಟ್‌ಗಳನ್ನು ವಿತರಿಸಲಾಯಿತು.


ಈ ಸಂಧರ್ಭದಲ್ಲಿ ಶಾಸಕ ಹಂಪಯ್ಯನಾಯಕ, ಗ್ಯಾರಂಟಿ ಸಮಿತಿಯ ಅಧ್ಯಕ್ಷರಾದ ಅಂಬರೇಶಪ್ಪ,ಬಿ.ಕೆ,ಗ್ರೇಡ್-2 ತಹಶೀಲ್ದಾರ್ ಅಬ್ದುಲ್ ವಾಹಿದ್, ತಾಲೂಕು ಪಂಚಾಯಿತಿ ಇ.ಓ. ಖಾಲಿದ್ ಅಹ್ಮದ್, ಪಿ.ಐ. ಸೋಮಶೇಖರ ಎಸ್.ಕೆಂಚರೆಡ್ಡಿ, ಪುರಸಭೆ ಮುಖ್ಯಾಧಿಕಾರಿ ಪರಶುರಾಮ್ ದೇವಮಾನೆ, ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ.ಡಿ, ಮುಖಂಡರಾದ ಶಿವಮೂರ್ತಿ,ಅಮರೇಗೌಡ, ಶರಣಯ್ಯನಾಯಕ ಗುಡದಿನ್ನಿ, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

ಇತಿಹಾಸದ ಪರಂಪರೆ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು : ಮುಡುಬಿ ಗುಂಡೇರಾವ

ಕಲಬುರಗಿ, ಏ.04-

ನಾಡಿನ ಕಲೆ ಸಾಹಿತ್ಯ ಸಂಸ್ಕೃತಿಗಳ ಜೊತೆಗೆ ನಮ್ಮ ಇತಿಹಾಸ ಪರಂಪರೆ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು ಎಂದು ಸಂಶೋಧನಾ ಸಾಹಿತಿ ಮುಡುಬಿ ಗುಂಡೇರಾವ ಕರೆ ನೀಡಿದರು.

ನಗರದ ಕನ್ನಡ ಭವನದಲ್ಲಿ ಶನಿವಾರ ಜರುಗಿದ ಜಿಲ್ಲಾ 22ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಮುಡುಬಿ ಗುಂಡೇರಾವ ಅವರು ಏರ್ಪಡಿಸಿದ ಸೌಹಾರ್ದ ಕೂಟ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದ ಅವರು, ಸ್ಮಾರಕಗಳು, ಐತಿಹಾಸಿಕ ಸ್ಥಳ ಮತ್ತು ಶಾಸನಗಳ ಕುರಿತು ತಿಳಿವಳಿಕೆ ಇದ್ದಾಗ ಹೊಸ ಪರಂಪರೆ ಹುಟ್ಟು ಹಾಕಬಹುದು. ನಮ್ಮ ಒತ್ತಡದ ಬದುಕಿನಿಂದಾಗಿ ಇತಿಹಾಸದ ಅನೇಕ



ಸ್ಮಾರಕಗಳು ನಶಿಸಿ ಹೋಗುತ್ತಿವೆ. ಅವುಗಳನ್ನು ಮುಂದಿನ ಪೀಳಿಗೆಗೆ ಅರಿವು ಮೂಡಿಸಲು ಸಂಶೋಧನಾ ಕಾರ್ಯಗಳು ಹೆಚ್ಚಾಗಿ ನಡೆಯಬೇಕು. ಇಂದು ನಾವು ಇತಿಹಾಸ ಅರಿತರೆ ಹೊಸ ಇತಿಹಾಸ ಸೃಷ್ಟಿಸಬಹುದು ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳಲ್ಲಿ ವರ್ತಮಾನದ ಪ್ರಜ್ಞೆಯ ಜೊತೆಗೆ ಇತಿಹಾಸದ ಪ್ರಜ್ಞೆಯೂ ಮುಖ್ಯವಾಗಿದೆ. ಇತಿಹಾಸಕ್ಕೆ ಸಂಬಂಧಿಸಿದ ಸ್ಮಾರಕಗಳು, ಸ್ಥಳಗಳ ಉಲ್ಲೇಖಗಳನ್ನು ಉಳಿಸಿ ಪೋಷಿಸಬೇಕಾಗಿದೆ. ಈ ದಿಸೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ನಿರಂತರ ಕಾರ್ಯ ಚಟುವಟಿಕೆಗಳನ್ನು ಏರ್ಪಡಿಸುತ್ತಿದೆ ಎಂದರು.

ಕಸಾಪ ಕೇಂದ್ರ ಸಮಿತಿ ಸದಸ್ಯ ಸಯ್ಯದ ನಜೀರುದ್ದಿನ್ ಮುತ್ತವಲ್ಲಿ, ಖ್ಯಾತ ಚಿತ್ರ ಕಲಾವಿದ ಆಯೋಜುದ್ದೀನ್ ಪಟೇಲ್, ಸರಕಾರಿ ನೌಕರರ ಸಂಘದ ಕೇಂದ್ರ ಸಮಿತಿ ಸದಸ್ಯ ಧರ್ಮರಾಜ ಜವಳಿ, ಕಸಾಪ ತಾಲೂಕಾಧ್ಯಕ್ಷೆ ಶಿವಲೀಲಾ ಕಲಗುರ್ಕಿ ಮಾತನಾಡಿದರು.

ಜಿಲ್ಲಾ ಕಸಾಪ ಕಾರ್ಯದರ್ಶಿಗಳಾದ ಶಿವರಾಜ ಅಂಡಗಿ, ಧರ್ಮಣ್ಣ ಎಚ್.ಧನ್ನಿ, ಅಮೃತಪ್ಪ ಅಣೂರ, ರವಿ ಶಹಾಪೂರಕರ, ಡಾ.ರೆಹಮಾನ ಪಟೇಲ್, ಪ್ರಕಾಶ ಗೊಣಗಿ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಂಡಿದ್ದರು.

ಅಫಜಲಪುರ ದೇಸಾಯಿ ಕಲ್ಲೂರದಲ್ಲಿ ಶ್ರೀ ಸಿದ್ದೇಶ್ವರ ಜಾತ್ರಾ ಮಹೋತ್ಸವ



ಅಫಜಲಪುರ, ಏ.04-

ತಾಲೂಕಿನ ದೇಸಾಯಿ ಕಲ್ಲೂರ ಗ್ರಾಮದಲ್ಲಿ ಶ್ರೀ ಸಿದ್ದೇಶ್ವರ ಜಾತ್ರಾ ಮಹೋತ್ಸವವು ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಅದ್ದೂರಿಯಾಗಿ ಜರುಗಿತು.

ಏ. 1ರಂದು ಬೆಳಿಗ್ಗೆ 9 ಗಂಟೆಗೆ ಶ್ರೀ ವೇ. ಗುರುಪಾದಯ್ಯ ಮೇಲಿನಮಠ ಅವರ ನೇತೃತ್ವದಲ್ಲಿ ರುದ್ರಾಭಿಷೇಕ ನೆರವೇರಿತು. ಗ್ರಾಮದ ಸುಮಂಗಲೆಯರಿಂದ ಕುಂಭಾಭಿಷೇಕ ಕಾರ್ಯಕ್ರಮವೂ ಶ್ರದ್ಧಾಭಕ್ತಿಯಿಂದ ನಡೆಯಿತು.

ಗುರುವಾರ ಮುಂಜಾನೆ 10:30ಕ್ಕೆ ಶ್ರೀ ಸಿದ್ದೇಶ್ವರ ಪಲ್ಲಕ್ಕಿ ಮೆರವಣಿಗೆಯು ಭಜನಾ ತಂಡಗಳು, ಕಲ್ಲೂರ ಶಾಲೆಯ ಬಾಲಕರಿಂದ ಕೋಲಾಟ ಹಾಗೂ ವಾದ್ಯಮೇಳದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಭ್ರಮದಿಂದ ಸಾಗಿತು.

ಬಳಿಕ ದೇಶಮುಖ ಮನೆತನದಿಂದ ಪ್ರಾರಂಭವಾದ ಶ್ರೀ ರೇವಣಸಿದ್ದೇಶ್ವರ ಹಾಗೂ ಶ್ರೀ ಸಿದ್ದರಾಮೇಶ್ವರ ಪುರಾಣಗಳು ಶ್ರೀ ವೇ. ಸಿದ್ದಲಿಂಗಯ್ಯ ಶಾಸ್ತ್ರಿಗಳು, ಮಂಜುನಾಥ ತೇರದಾಳ ಗವಾಯಿ ಮತ್ತು ಆಕಾಶವಾಣಿ ಕಲಾವಿದ ಸಿದ್ದಣ್ಣ ಹೂಗಾರ ಅವರ ಸಂಗೀತ-ಸಾಹಿತ್ಯದೊಂದಿಗೆ ಭಕ್ತಿಭಾವದಲ್ಲಿ ನಡೆಯಿತು.

ಸಂಜೆ 6 ಗಂಟೆಗೆ 24ನೇ ವರ್ಷದ ರಥೋತ್ಸವವು ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರ ಸಮ್ಮುಖದಲ್ಲಿ ಭವ್ಯವಾಗಿ ನೆರವೇರಿತು.

ಈ ಸಂದರ್ಭದಲ್ಲಿ ವಿಶ್ವಾರಾಧ್ಯ ಶಿವಾಚಾರ್ಯರು, ವೇ.ಮೂ. ಗುರುಪಾದಯ್ಯ ಮೇಲಿನಮಠ, ಜಗದೀಶ್ ದೇಶಮುಖ, ಎಸ್.ವೈ.ಪಾಟೀಲ್, ಸಿದ್ದಯ್ಯ ಆಕಾಶಮಠ, ದೇವೇಂದ್ರ ದೇಸಾಯಿ ಕಲ್ಲೂರ, ಬಸಯ್ಯ ಆಕಾಶಮಠ, ಭಗವಂತ್ರಾಯ ಪಂಚಿಕಟ್ಟಿ, ಅಡೇವಪ್ಪ ಪಂಚಿಕಟ್ಟಿ, ಮುತ್ತಪ್ಪ ವರಗ್ಗಿ, ಅರುಣಕುಮಾರ ಉಪ್ಪಿನ, ಗುಂಡೇರಾವ್ ದೇಶಮುಖ, ಶಂಕರ ತಳವಾರ, ಶರಣು ಜೇರಟಗಿ, ಮಲ್ಲಿನಾಥ ಪಟೇದಾರ ಸೇರಿದಂತೆ ಗ್ರಾಮದ ಹಿರಿಯರು, ಮುಖಂಡರು ಹಾಗೂ ನೂರಾರು ಭಕ್ತರು ಪಾಲ್ಗೊಂಡಿದ್ದರು.



ಶುಭ ಶುಕ್ರವಾರದ ಅಂಗವಾಗಿ ಮಜ್ಜಿಗೆ ವಿತರಣೆ

ಕಲಬುರಗಿ, ಏ.04-

ಯೇಸು ಕ್ರಿಸ್ತನ ತ್ಯಾಗವನ್ನು ಸ್ಮರಿಸುವ ಶುಭ ಶುಕ್ರವಾರ ಅಂಗವಾಗಿ ನಗರದ ಹಿಂದುಸ್ತಾನ್ ಚರ್ಚ್ ಆವರಣದಲ್ಲಿ ಖ್ಯಾತ ಉದ್ಯಮಿಗಳಾದ ಉಷಾ ಲಾಹೋಟಿ ಹಾಗೂ ಶ್ರೀಕಾಂತ ಲಾಹೋಟಿ ಅವರ ವತಿಯಿಂದ ಭಕ್ತರು ಹಾಗೂ ಸಾರ್ವಜನಿಕರಿಗೆ ಮಜ್ಜಿಗೆ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮುಖಂಡ ಸಂಧ್ಯಾರಾಜ್ ಸ್ಯಾಮುಯೆಲ್, ಧರ್ಮಗುರು ಶಿರೋಮಣಿ, ಸ್ಯಾಮುಯೆಲ್ ಬಾಳೇಕರ್ ಸೇರಿದಂತೆ ಹಲವಾರು ಕ್ರೈಸ್ತ ಬಂಧುಗಳು ಹಾಗೂ ಭಕ್ತರು ಭಾಗವಹಿಸಿ ಕಾರ್ಯಕ್ರಮಕ್ಕೆ ಸಾಥ್ ನೀಡಿದರು. ಶುಭ ಶುಕ್ರವಾರದ ಈ ಸೇವಾ ಕಾರ್ಯವು ಸಮಾಜದಲ್ಲಿ ಸಹಾನುಭೂತಿ, ಸಹಕಾರ ಮತ್ತು ಮಾನವೀಯತೆಯ ಮೌಲ್ಯಗಳನ್ನು ಬಿಂಬಿಸಿತು.



ವಿಜಯನಗರ ತಾಯಿ-ಮಕ್ಕಳ ಆಸ್ಪತ್ರೆಗೆ ಉಚಿತ ವಸತಿ ನಿಲಯ ಹಸ್ತಾಂತರ

ವಿಜಯನಗರ, ಏ.04-

ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಅವರು ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಬರುವ ಗರ್ಭಿಣಿ ಮಹಿಳೆಯರು ಹಾಗೂ ಬಾಣಂತಿಯರ ಪಾಲಕರಿಗೆ

ಅನುಕೂಲವಾಗುವ ಉದ್ದೇಶದಿಂದ ಉಚಿತ ವಸತಿ ನಿಲಯ (ಡಾರ್ಮಿಟರಿ)ಯನ್ನು ಹಸ್ತಾಂತರಿಸಿದರು.

ಈ ವಸತಿ ನಿಲಯದಲ್ಲಿ ಸುಸಜ್ಜಿತ ಕಾಟ್-ಬೆಡ್‌ಗಳು, ಶೌಚಾಲಯ ವ್ಯವಸ್ಥೆ ಹಾಗೂ ಶುದ್ಧ ಕುಡಿಯುವ ನೀರಿನ ಸೌಲಭ್ಯಗಳನ್ನು ಕಲ್ಪಿಸಲಾಗಿದ್ದು, ಆಸ್ಪತ್ರೆಗೆ ದೂರದಿಂದ ಬರುವ ಕುಟುಂಬಗಳಿಗೆ ಇದು ಬಹಳ ಸಹಾಯಕವಾಗಲಿದೆ.

ಈ ಸಂದರ್ಭದಲ್ಲಿ ಬಿಎಂಎನ್‌ನ ಗಣೇಶ ಹೆಗ್ಡೆ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಎಲ್.ಆರ್. ಶಂಕರ್ ನಾಯ್ಕ್, ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ. ಜಂಬಯ್ಯ, ಶಸ್ತ್ರಚಿಕಿತ್ಸಕರು, ವಿವಿಧ ಕಾರ್ಯಕ್ರಮಾಧಿಕಾರಿಗಳು, ಹಿರಿಯ ತಜ್ಞ ವೈದ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಕಾಂಗ್ರೆಸ್ ಪಕ್ಷ ಎಲ್ಲ ವರ್ಗಗಳ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ನೀಡಿದೆ : ಕೆ.ಎಚ್.ಮುನಿಯಪ್ಪ

ಬಾಗಲಕೋಟೆ ,ಏ.04-

ಕಾಂಗ್ರೆಸ್ ಪಕ್ಷ ಬಡವರು, ಕೂಲಿ ಕಾರ್ಮಿಕರು, ದೀನ ದಲಿತರು, ಹಿಂದುಳಿದವರ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ನೀಡಿದೆ. ಈ ಭಾಗದ ಜನರು ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಅವರಿಗೆ ಆಶೀರ್ವಾದ ಮಾಡುವ ಮೂಲಕ ಮತ್ತೊಮ್ಮೆ ಕಾಂಗ್ರೆಸ್ ಬೆಂಬಲಿಸಬೇಕು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ಕರೆ ನೀಡಿದರು.

ಶುಕ್ರವಾರ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಶಿರೂರು ಚನ್ನಯ್ಯನಗರದಲ್ಲಿ ನಡೆದ ಚುನಾವಣಾ ಪ್ರಚಾರ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಉಮೇಶ್ ಮೇಟಿ ಅವರಿಗೆ ಬಹುಮತದ ಗೆಲುವು ದೊರಕಿಸುವಂತೆ ಸಾರ್ವಜನಿಕರಿಗೆ ಮನವಿ ಮಾಡಿದರು.



ಕಾಂಗ್ರೆಸ್ ಪಕ್ಷ ಬಡವರ ಬದುಕಿಗೆ ಭದ್ರತೆ ನೀಡುವ ನಿಟ್ಟನಲ್ಲಿ ಹಲವು ಮಹತ್ವದ ಯೋಜನೆಗಳನ್ನು ಜಾರಿಗೆ ತಂದಿದೆ. ಬಡವರಿಗೆ ಅಕ್ಕಿ ದೊರೆಯಬೇಕು, ಅವರು ನೆಮ್ಮದಿಯಾಗಿ ಊಟ ಮಾಡಬೇಕು ಮತ್ತು ಗೌರವಯುತ ಜೀವನ ನಡೆಸಬೇಕು ಎಂಬ ಉದ್ದೇಶದಿಂದಲೆ ಕಾಂಗ್ರೆಸ್ ಪಕ್ಷ ಕಾರ್ಯಕ್ರಮಗಳನ್ನು ರೂಪಿಸಿದೆ ಎಂದು ಅವರು ಹೇಳಿದರು.

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ನಾಯಕತ್ವದಲ್ಲಿ ಕಡುಬಡವರಿಗಾಗಿ ಆಹಾರ ಭದ್ರತೆ ಕಾಯ್ದೆ ಜಾರಿಗೆ ತರಲಾಯಿತು. ದೇಶದಲ್ಲಿ ಯಾವುದೇ ಸರಕಾರ ಇದ್ದರೂ ಬಡವರಿಗೆ ಅಕ್ಕಿ ನೀಡಲೇಬೇಕು ಎಂಬ ದೃಷ್ಟಿಯಿಂದ ಈ ಕಾನೂನು ರೂಪಿಸಲಾಗಿದೆ ಎಂದು ಮುನಿಯಪ್ಪ ತಿಳಿಸಿದರು.

2013ರಲ್ಲಿ ಮುಖ್ಯಮಂತ್ರಿ ಆಗಿ ಅಧಿಕಾರ ಸ್ವೀಕರಿಸಿದ ಸಿದ್ದರಾಮಯ್ಯ ಪ್ರಮಾಣ ವಚನ ಸ್ವೀಕರಿಸಿದ ಕೂಡಲೆ ಬಡವರಿಗೆ ಉಚಿತ ಅಕ್ಕಿ ವಿತರಣೆ ಮಾಡುವ ಅನ್ನಭಾಗ್ಯ ಯೋಜನೆಯನ್ನು ಜಾರಿಗೆ ತಂದು, ಜನರಿಗೆ ನೆಮ್ಮದಿಯ ಜೀವನವನ್ನು ಕಲ್ಪಿಸಿದರು. ಬಳಿಕವೂ ಈ ಯೋಜನೆಯನ್ನು ಮತ್ತಷ್ಟು ಬಲಪಡಿಸಿ, ಅಕ್ಕಿಯ ಜೊತೆಗೆ ಹಣ ಸಹಾಯ ನೀಡುವ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ವಿವರಿಸಿದರು. ಇದೊಂದೇ ಅಲ್ಲ, ರಾಜ್ಯ ಸರಕಾರ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ. ಮಹಿಳೆಯರಿಗೆ ಮಾಸಿಕ 2 ಸಾವಿರ ರೂ.ಆರ್ಥಿಕ ನೆರವು, 200 ಯೂನಿಟ್ ವರೆಗೆ ಉಚಿತ ವಿದ್ಯುತ್, ಉದ್ಯೋಗಕ್ಕಾಗಿ ತರಬೇತಿ, ಮಕ್ಕಳಿಗೆ ಶಿಕ್ಷಣ ಸೌಲಭ್ಯ-ಇವೆಲ್ಲವೂ ಬಡವರ ಬದುಕು ಸುಧಾರಿಸುವ ಕಾಂಗ್ರೆಸ್ ಪಕ್ಷದ ಬದ್ಧತೆಯನ್ನು ತೋರಿಸುತ್ತವೆ ಎಂದು ಮುನಿಯಪ್ಪ ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಎಚ್.ಆಂಜನೇಯ, ಮಾಜಿ ಸಂಸದ ಚಂದ್ರಪ್ಪ ಹಾಗೂ ಇತರ ಮುಖಂಡರು ಉಪಸ್ಥಿತರಿದ್ದರು.

ಗಣತಿದಾರರಿಗೆ ತರಬೇತಿ: ಮನೆ ಮನೆಗೆ ಮಾಹಿತಿ ಸಂಗ್ರಹಕ್ಕೆ ಸೂಚನೆ

ಕನಕಗಿರಿ, ಏ.04-

ಪಟ್ಟಣದ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ಗಣತಿದಾರರು ಹಾಗೂ ಮೇಲ್ವಿಚಾರಕರಿಗೆ ತರಬೇತಿ ಕಾರ್ಯಕ್ರಮ ನಡೆಯಿತು.

ಉಸ್ತುವಾರಿ ಅಧಿಕಾರಿ ಹಾಗೂ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಲಕ್ಷ್ಮಣ ಕಟ್ಟಿಮನಿ ಮಾತನಾಡಿ, 2026ರ ಅಂದಾಜು ಪ್ರಕಾರ ಪಟ್ಟಣದ ಜನಸಂಖ್ಯೆ 19,942 ಇದೆ.




ಒಟ್ಟು 35 ಗಣತಿ ದಾರರು ಹಾಗೂ 6 ಮೇಲ್ವಿ ಚಾರಕರನ್ನು ನೇಮಿಸಲಾಗಿದ್ದು, ಗಣತಿದಾರರು ಮನೆ ಮನೆಗೆ ಭೇಟಿ ನೀಡಿ ನಿಖರ ಮಾಹಿತಿ ಸಂಗ್ರಹಿಸ ಬೇಕು ಎಂದು ಸೂಚಿಸಿದರು. ತರಬೇತಿದಾರ ಜಯಪ್ರಕಾಶ ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿ ರಾಜೀವ್ ಎಂ.ಆರ್ ತರಬೇತಿ ನೀಡಿದರು. ನೋಡಲ್ ಅಧಿಕಾರಿ ಸೋಮಶೇಖರಗೌಡ ಕಾರ್ಯಕ್ರಮಕ್ಕೆ ಭೇಟಿ ನೀಡಿ ಅಗತ್ಯ ಸಲಹೆ ಮತ್ತು ಸೂಚನೆಗಳನ್ನು ನೀಡಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ತಮ್ಮದೇ ಅವನತಿಗೆ ಅಂತಿಮ ಮೊಳೆ ಹೊಡೆದುಕೊಳ್ಳುತ್ತಿದ್ದಾರೆ ಟ್ರಂಪ್!



ಟ್ರಂಪ್ ಅಮೆರಿಕದಲ್ಲಿ ಜನ ವಿಶ್ವಾಸ ಕಳೆದುಕೊಂಡಿದ್ದಾರೆ. ಟ್ರಂಪ್‌ರನ್ನು ಶ್ವೇತಭವನದಿಂದ ಹೊರಹಾಕಲು ಅಮೆರಿಕನ್ನರು ಎದುರು ನೋಡುತ್ತಿದ್ದಾರೆ. ತಮ್ಮ ಎಡಬಿಡಂಗಿ ನೀತಿ-ನಿರ್ಧಾರ-ಧೋರಣೆಗಳಿಂದ ತಮ್ಮ ಅವನತಿಯ ಅಂತಿಮ ಮೊಳೆಯನ್ನು ಟ್ರಂಪ್ ಅವರೇ ಹೊಡೆದುಕೊಳ್ಳುತ್ತಿದ್ದಾರೆ.

ಅಮೆರಿಕವನ್ನು ಉದ್ದೇಶಿಸಿ ದೂರದರ್ಶನದಲ್ಲಿ ಮಾತನಾಡಿದ ಟ್ರಂಪ್, ಇರಾನ್ ವಿರುದ್ಧ ಗೆದ್ದಿದ್ದೇವೆಂದು ಕಾಲ್ಪನಿಕ ವಿಜಯದ ಕುರಿತು ಹೇಳಿಕೊಂಡಿದ್ದಾರೆ. ಯುದ್ಧದಿಂದ ಕೆಲವೇ ವಾರಗಳಲ್ಲಿ ಹಿಂದೆ ಸರಿಯಲು ತಾವು ಸಿದ್ದರಿರುವುದಾಗಿ ಸೂಚನೆ ನೀಡಿದ್ದಾರೆ.

ಟ್ರಂಪ್ ವಿಜಯದ ಕುರಿತು ಮಾತನಾಡುತ್ತಿರುವುದು ಅವರ ಇತ್ತೀಚಿನ ಭ್ರಮೆಯ ಮಾತುಗಳಲ್ಲಿ ಒಂದು. ಯಾಕೆಂದರೆ, ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಯುದ್ಧ ಆರಂಭಿಸಿದ ಬಳಿಕ, ಹಲವಾರು ಸಂದರ್ಭಗಳಲ್ಲಿ ಟ್ರಂಪ್ ಮಾತುಕತೆ ಭ್ರಮೆಯಿಂದಲೇ ತುಂಬಿರುವಂತೆ ಕಂಡಿದೆ. ಮಾತ್ರವಲ್ಲ, ಅವರ ಹೇಳಿಕೆಗಳು ಪದೇ-ಪದೇ ಬದಲಾಗಿವೆ. ಶುಕ್ರವಾರ ಭಾಷಣವೂ ಅವರ ಭ್ರಮೆಯ ಮುಂದುವರಿಕೆಯಂತೆಯೇ ಕಂಡಿದೆ.

ಆದರೂ, ಅವರ ಭಾಷಣದಲ್ಲಿ ಕೆಲವು ವಿಷಯಗಳು ಎದ್ದು ಕಾಣುತ್ತಿದ್ದವು. ಇರಾನ್ ನೌಕಾಪಡೆ ಮತ್ತು ವಾಯುಪಡೆಗಳು ಬಹುತೇಕ ಧ್ವಂಸವಾಗಿವೆ ಎಂದು ಅವರು ಬಡಾಯಿ ಕೊಚ್ಚಿಕೊಂಡಿದ್ದಾರೆ. ಇದು ಇರಾನ್ ಮೇಲಿನ ತಮ್ಮ ನಿರ್ಣಾಯಕ ವಿಜಯವೆಂದು ಪ್ರತಿಪಾದಿಸಿದ್ದಾರೆ. ಜೊತೆಗೆ, ಮುಂಬರುವ ಎರಡು ವಾರಗಳಲ್ಲಿ ಇರಾನ್ ಮೇಲೆ ಅಮೆರಿಕ ತೀವ್ರವಾಗಿ ದಾಳಿ ಮಾಡಲಿದೆ ಎಂದು ಅವರು ಹೇಳಿಕೊಂಡಿದ್ದಾರೆ. ಆದರೆ, ಅಮೆರಿಕದ ಭೂಸೇನೆಯನ್ನು ಇರಾನ್‌ಗೆ ನುಗ್ಗಿಸುವ ಮತ್ತು ಬಲವಂತವಾಗಿಯಾದರೂ ಹಾರ್ಮುಜ್ ಜಲಸಂಧಿಯನ್ನು ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸಲು ಅಮೆರಿಕ ಮಿಲಿಟರಿ ಬದ್ಧವಾಗಿದೆ ಎಂದು ಹೇಳುವ ಧೈರ್ಯವನ್ನು ಅವರು ತೋರಿಸಿಲ್ಲ. ಆ ಬಗ್ಗೆ ಯಾವುದೇ ಪ್ರಸ್ತಾಪ ಮಾಡಲಿಲ್ಲ.

ಸ್ಪಷ್ಟ ವಿಚಾರವೆಂದರೆ, ಹಾರ್ಮುಜ್ ಜಲಸಂಧಿಯ ನಿರ್ಬಂಧದಿಂದಾಗಿ ಬಾಧಿತವಾಗಿರುವ ಬಹುತೇಕ ದೇಶಗಳು ಅಮೆರಿಕದ ಮಿತ್ರರಾಷ್ಟ್ರಗಳೇ ಆಗಿವೆ. ಆದರೂ, ಜಲಸಂಧಿ ಕುರಿತಾದ ಜಾಗತಿಕ ಕಾಳಜಿಯನ್ನು ಟ್ರಂಪ್ ನಿರ್ಲಕ್ಷಿಸಿದ್ದಾರೆ. ಮಾತ್ರವಲ್ಲ, ಜಲಸಂಧಿ ವಿಚಾರವಾಗಿ ತಮ್ಮ ಮಿತ್ರರಾಷ್ಟ್ರಗಳೇ ಜವಾಬ್ದಾರಿ ಹೊತ್ತು, ಇರಾನ್ ಜೊತೆ ಮಾತುಕತೆ ನಡೆಸಬೇಕು. ಒತ್ತಡ ಹೇರಬೇಕು ಎಂದು ಹೇಳಿದ್ದು, ತಾವೇ ಸೃಷ್ಟಿಸಿದ ಬಿಕ್ಕಟ್ಟಿನ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಯತ್ನಿಸುತ್ತಿದ್ದಾರೆ.

ಯಾಕೆಂದರೆ, ವೆನಜುವೆಲಾ ಅಧ್ಯಕ್ಷರನ್ನು ಅಪಹರಿಸಿ, ಅಲ್ಲಿನ ತೈಲವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಡಿರುವ ಅಮೆರಿಕಗೆ ತೈಲ ಬಿಕ್ಕಟ್ಟಿನ ಬಿಸಿ ತಟ್ಟಿಲ್ಲ. ತಾವು ಇಂಧನ ವಿಚಾರದಲ್ಲಿ ಸ್ವಾವಲಂಬಿಯೆಂದು ಹೇಳಿಕೊಂಡಿರುವ ಟ್ರಂಪ್, ತಮ್ಮ ಮಿತ್ರರಿಗೂ ತೈಲ ಪೂರೈಸುವುದಾಗಿ ಹೇಳಿಕೊಂಡಿದ್ದಾರೆ.

ಗಮನಾರ್ಹವೆಂದರೆ, ಅಮೆರಿಕವು ತೈಲದಲ್ಲಿ ಸ್ವಾವಲಂಬಿಯಾಗಿದೆ ಎಂಬುದು ಎಷ್ಟು ಸತ್ಯವೋ, ಅಮೆರಿಕನ್ನರು ಇಂಧನಕ್ಕಾಗಿ ಅತಿ ಹೆಚ್ಚು ಬೆಲೆ ತೆರುತ್ತಿದ್ದಾರೆ ಎಂಬುದೂ ಅಷ್ಟೇ ಕಟುಸತ್ಯ. ಈ ಸತ್ಯವನ್ನು ಒಪ್ಪಿಕೊಳ್ಳುವ ಧೈರ್ಯ ಟ್ರಂಪ್‌ಗಿಲ್ಲ. ಜಾಗತಿಕ ಮಾರುಕಟ್ಟೆಯಲ್ಲಿನ ಬೆಲೆ ಏರಿಕೆಯು ಅಮೆರಿಕದ ಮೇಲೂ ಪ್ರಭಾವ ಬೀರುತ್ತಿದೆ. ಇಂಧನಕ್ಕಾಗಿ ಅಮೆರಿಕ ಹಾರ್ಮುಜ್ ಜಲಸಂಧಿಯನ್ನು ಅವಲಂಬಿಸದೇ ಇರಬಹುದು. ಆದರೆ, ರಸಗೊಬ್ಬರಗಳ ಸಾಗಣೆಗೆ ಇದೇ ಜಲಸಂಧಿ ಅಮೆರಿಕಗೂ ಅತೀ ಮುಖ್ಯ.

ಹೀಗಾಗಿ, ಇರಾನ್ ಮೇಲೆ ಅಮೆರಿಕ ನಿರ್ಣಾಯಕ ವಿಜಯದ ಪ್ರತಿಪಾದನೆ, ಭೂಸೇನೆಯ ಆಕ್ರಮಣದ ಬಗ್ಗೆ ಪ್ರಸ್ತಾಪ ಇಲ್ಲದಿರುವುದು ಹಾಗೂ ಹಾರ್ಮುಜ್ ಜಲಸಂಧಿಯ ಉಸ್ತುವಾರಿಯನ್ನು ಮಿತ್ರರಾಷ್ಟ್ರಗಳೇ ಸ್ವತಂತ್ರವಾಗಿ ನಿಭಾಯಿಸಲಿ ಎಂಬ ಕರೆ- ಇವೆಲ್ಲವೂ ಅವರು ಯುದ್ಧದಿಂದ ಹಿಂದೆ ಸರಿದಿದ್ದಾರೆ. ತಾವು ಇರಾನ್ ಮುಂದೆ ಮಂಡಿಯೂರಿದ್ದೇವೆ ಎಂಬುದನ್ನು ಒಪ್ಪಿಕೊಳ್ಳಲಾಗದೆ, ಹೇಗಾದರೂ ಯುದ್ಧಕ್ಕೆ ಅಂತ್ಯ ಹಾಡಬೇಕೆಂಬ ಪ್ರಯತ್ನ ಮಾಡುತ್ತಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ.

ಅಚ್ಚರಿ ಎಂಬಂತೆ, ಟ್ರಂಪ್ ಅವರು ತಾವು ಇರಾನ್‌ನಲ್ಲಿ ಆಡಳಿತ ಬದಲಾವಣೆಯನ್ನು ಎಂದಿಗೂ ಬಯಸಿರಲಿಲ್ಲವೆಂದು ಹೇಳಿಕೊಂಡಿದ್ದಾರೆ. ಎಲ್ಲರನ್ನೂ ಬೆರಗುಗೊಳಿಸಿದ್ದಾರೆ. ಇದು ಅವರ ತಂತ್ರ-ಕುತಂತ್ರಗಳೆಲ್ಲವೂ ತಲೆ ಕೆಳಗಾಗಿ, ಅವರು ಮತಿ-ಭ್ರಾಂತಿಗೊಂಡಿದ್ದಾರೆ ಎಂಬುದು ಎದ್ದುಕಾಣುತ್ತದೆ.

ಪ್ರತಿದಿನ ಇರಾನ್ ಮೇಲೆ ವಾಯುದಾಳಿ ನಡೆಸುತ್ತಿದ್ದರೂ ಟ್ರಂಪ್ ಕಾರ್ಯತಂತ್ರದ ಸೋಲನ್ನು ಎದುರಿಸುತ್ತಿದ್ದಾರೆ. ಯಾಕೆಂದರೆ, ಇರಾನ್‌ನಲ್ಲಿ ಆಡಳಿತ ಬದಲಾವಣೆ ಅಥವಾ ಇರಾನ್‌ನ ಪರಮಾಣು ಮತ್ತು ಕ್ಷಿಪಣಿ ಸಾಮರ್ಥ್ಯಗಳನ್ನು ಕುಗ್ಗಿಸುವ ತಮ್ಮ ಉದ್ದೇಶಗಳನ್ನು ಈಡೇರಿಸುವುದರ ಹತ್ತಿರಕ್ಕೂ ಟ್ರಂಪ್ ಬಂದಿಲ್ಲ. ಹಾಗೆ ನೋಡಿದರೆ, ಇರಾನ್ ಎಲ್ಲ ಆಟದ ಕಾರ್ಡ್‌ಗಳನ್ನು ತನ್ನ ಕೈಯಲ್ಲಿ ಇಟ್ಟುಕೊಂಡಿದೆ. ಆದರೆ, ಟ್ರಂಪ್ ಕೈಯಲ್ಲಿ ಆಟಕ್ಕೆ ಯಾವುದೇ ಕಾರ್ಡ್‌ಗಳೂ ಇಲ್ಲ. ಇದು ಸ್ವತಃ ಅಮೆರಿಕದ ಹಲವು ಪ್ರಜ್ಞಾವಂತರ ಅಭಿಪ್ರಾಯವೂ ಕೂಡ.

2025ರಲ್ಲಿ ಟ್ರಂಪ್ ಅಧಿಕಾರಕ್ಕೆ ಬಂದ ಬಳಿಕ, ಟ್ರಂಪ್ ಧೋರಣೆಗಳ ಕುರಿತು ಅಮೆರಿಕದಲ್ಲಿ ಅಭಿಪ್ರಾಯಗಳು ಭಾರೀ ಪ್ರಮಾಣದಲ್ಲಿ ಬದಲಾಗಿವೆ. ಟ್ರಂಪ್ ವಿರುದ್ಧ ಅಮೆರಿಕದಾದ್ಯಂತ ಆಕ್ರೋಶ ಮಡುಗಟ್ಟುತ್ತಿದೆ. ಬೀದಿಗಳಲ್ಲಿ ವ್ಯಕ್ತವಾಗುತ್ತಿದೆ.

ಟ್ರಂಪ್ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆಯೇ, ಅಮೆರಿಕ ಫಸ್ಟ್ ನೀತಿಯಡಿ ಹಲವು ರಾಷ್ಟ್ರಗಳ ಮೇಲೆ ತೀವ್ರತರವಾದ ಸುಂಕಗಳನ್ನು ಹೇರಿದರು. ಆದರೆ, ಈ ಸುಂಕಗಳು ಇತರ ರಾಷ್ಟ್ರಗಳಿಗಿಂತ ಅಮೆರಿಕನ್ನರನ್ನೇ ಹೆಚ್ಚಾಗಿ ಬಾಧಿಸಿದವು. ಈ ಸುಂಕಗಳ ಹೆಚ್ಚಳದಿಂದ ದೈನಂದಿನ ವಸ್ತುಗಳ ಬೆಲೆ ಏರಿಕೆಯಾಗಿದೆ. ವಿಶೇಷವಾಗಿ, ಅಮೆರಿಕದ ಕೃಷಿ ವಲಯಕ್ಕೆ ಅಗತ್ಯವಾದ ರಸಗೊಬ್ಬರಗಳ ಬೆಲೆ 40%ರಷ್ಟು ಏರಿಕೆಯಾಗಿದೆ. ಇದು ಅಮೆರಿಕನ್ ರೈತರಲ್ಲಿ ಆಕ್ರೋಶ ಮೂಡಿಸಿದೆ. ಇನ್ನು, ಟ್ರಂಪ್ ಅವರ ತುಘಲಕ್ ನಿರ್ಧಾರಗಳಿಂದಾಗಿ ಷೇರು ಮಾರುಕಟ್ಟೆ ಪದೇ ಪದೇ ಕುಸಿಯುತ್ತಿರುವುದು ಹೂಡಿಕೆದಾರರಲ್ಲಿ ಭೀತಿ ಹುಟ್ಟಿಸಿದೆ. ವಲಸಿಗರ ವಿರುದ್ಧದ ಕಾರ್ಯಾಚರಣೆ ಹೆಸರಿನಲ್ಲಿ ಟ್ರಂಪ್ ಅವರ ಆಕ್ರಮಣಕಾರಿ ವರ್ತನೆ ಮಾನವ ಹಕ್ಕುಗಳ ಹೋರಾಟಗಾರರ ಕೆಂಗಣ್ಣಿಗೆ ಗುರಿಯಾಗಿದೆ.

ಈಗ, ಇರಾನ್ ವಿರುದ್ಧದ ಸಂಘರ್ಷವು ಅಮೆರಿಕನ್ನರ ತಾಳ್ಮೆ ಕೆಡಿಸಿದೆ. ಸಮೀಕ್ಷೆಗಳ ಪ್ರಕಾರ, ಕೇವಲ 14%ರಷ್ಟು ಜನರು ಮಾತ್ರ ಇರಾನ್ ಮೇಲಿನ ದಾಳಿಯನ್ನು ಬೆಂಬಲಿಸುತ್ತಿದ್ದರೆ, ಬಹುತೇಕರು ಯುದ್ಧದ ವಿರುದ್ಧವಿದ್ದಾರೆ.

ಇತ್ತೀಚಿನ ದಿನಗಳಲ್ಲಿ, ಟ್ರಂಪ್ ವಿರುದ್ಧ ಅಮೆರಿಕದ ಇತಿಹಾಸದಲ್ಲೇ ಅತಿದೊಡ್ಡ ಸರಣಿ ಪ್ರತಿಭಟನೆಗಳು ನಡೆಯುತ್ತಿವೆ. ನೋ ಕಿಂಗ್ಸ್ ಹೆಸರಿನಡಿ ಸುಮಾರು 90 ಲಕ್ಷಕ್ಕೂ ಹೆಚ್ಚು ಜನರು ಬೀದಿಗೆ ಇಳಿದು ಟ್ರಂಪ್ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ. ಟ್ರಂಪ್ ಅವರು ಅಧ್ಯಕ್ಷೀಯ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ರಾಜಪ್ರಭುತ್ವದಂತೆ ನಡೆಸುತ್ತಿದ್ದಾರೆ ಎಂಬ ಆಕ್ರೋಶ ಅಮೆರಿಕದಾದ್ಯಂತ ವ್ಯಕ್ತವಾಗುತ್ತಿದೆ.

ಅಮೆರಿಕವು 2026ರ ಮಧ್ಯಂತರ ಚುನಾವಣೆಗಳಿಗೆ ಸಜ್ಜಾಗುತ್ತಿರುವ ಈ ಸಮಯದಲ್ಲಿ, ಟ್ರಂಪ್ ವಿರುದ್ಧದ ಈ ಆಕ್ರೋಶವು ಕೇವಲ ರಾಜಕೀಯ ವಿರೋಧವಾಗಿ ಮಾತ್ರವೇ ಉಳಿದಿಲ್ಲ. ಇದು, ಜನರ ಬದುಕು, ಅಮೆರಿಕದ ದಿಕ್ಕು-ಭವಿಷ್ಯದ ಕುರಿತಾದ ಕಳವಳಗಳಿಂದ ರೂಪುಗೊಂಡಿದೆ. ಟ್ರಂಪ್ ಅಮೆರಿಕದಲ್ಲಿ ಜನ ವಿಶ್ವಾಸ ಕಳೆದುಕೊಂಡಿದ್ದಾರೆ. ಟ್ರಂಪ್‌ರನ್ನು ಶ್ವೇತಭವನದಿಂದ ಹೊರಹಾಕಲು ಅಮೆರಿಕನ್ನರು ಎದುರು ನೋಡುತ್ತಿದ್ದಾರೆ. ತಮ್ಮ ಎಡಬಿಡಂಗಿ ನೀತಿ-ನಿರ್ಧಾರ-ಧೋರಣೆಗಳಿಂದ ತಮ್ಮ ಅವನತಿಯ ಅಂತಿಮ ಮೊಳೆಯನ್ನು ಟ್ರಂಪ್ ಅವರೇ ಹೊಡೆದುಕೊಳ್ಳುತ್ತಿದ್ದಾರೆ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಸುಪ್ರೀಂ ಕೋರ್ಟ್‌ನಲ್ಲಿ ಬಲವಂತವಾಗಿ ಹೂತುಹೋಯ್ತಾ ಮೋದಿ ಸಿಡಿ ಸತ್ಯ

ಭಾರಿ ಕುತೂಹಲ ಕೆರಳಿಸಿದ್ದ ಮೋದಿಯವರ ಸ್ನೂಪ್‌ಗೇಟ್ ಮತ್ತು ಖಾಸಗಿ ಸಿಡಿ ಪ್ರಕರಣದ ಅಂತ್ಯವು ಹಲವು ರಾಜಕೀಯ ಅನುಮಾನಗಳಿಗೆ ಎಡೆಮಾಡಿಕೊಟ್ಟಿತು. ಅಧಿಕೃತ ನ್ಯಾಯಾಲಯದ ದಾಖಲೆಗಳ ಪ್ರಕಾರ, ಪ್ರದೀಪ್ ಶರ್ಮಾ ಅವರ ಪರ ವಕೀಲರು ದಿಢೀರನೆ ಮೋದಿಯವರ ಮೇಲಿದ್ದ ವೈಯಕ್ತಿಕ ಆರೋಪಗಳನ್ನು ಹಿಂಪಡೆದರು. ಹೀಗೆ ಅರ್ಜಿದಾರರೇ ಸ್ವತಃ ಆರೋಪಗಳಿಂದ ಹಿಂದೆ ಸರಿದಿದ್ದರಿಂದ, ಸುಪ್ರೀಂ ಕೋರ್ಟ್ 2014ರಲ್ಲಿ ತನಿಖೆಯ ಅರ್ಜಿಯನ್ನು ವಜಾಗೊಳಿಸಿತು. ನ್ಯಾಯಾಲಯದ ಕಡತಗಳಲ್ಲಿ ಇದು ಕೇವಲ ಅರ್ಜಿದಾರರ ಹಿಂದೇಟಿನಿಂದ ವಜಾಗೊಂಡ ಪ್ರಕರಣವಾಗಿ ದಾಖಲಾದರೂ, ಅಧಿಕಾರದ ಪ್ರಭಾವದ ಮುಂದೆ ನೈಜ ಸಂಗತಿಗಳು ಎಂದಿಗೂ ಹೊರಬರಲಿಲ್ಲ ಎಂಬ ಅನುಮಾನಗಳು ಮಾತ್ರ ಇಂದಿಗೂ ಹಾಗೆಯೇ ಉಳಿದುಕೊಂಡಿವೆ.

2013-14ರ ಅವಧಿಯಲ್ಲಿ ಇಡೀ ದೇಶದ ರಾಜಕಾರಣದಲ್ಲಿ ಭಾರಿ ಸಂಚಲನ ಸೃಷ್ಟಿಸಿದ್ದ ಮತ್ತು ಸ್ನೂಪ್‌ಗೇಟ್ ಎಂದೇ ಕುಖ್ಯಾತಿ ಪಡೆದಿದ್ದ ಪ್ರಕರಣದಲ್ಲಿ, ಅಂದಿನ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಅವರ ಖಾಸಗಿ ಸಿಡಿಯೊಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಕೆಯಾಗಿತ್ತೆ? ಎಂಬ ಪ್ರಶ್ನೆ ಆಗಾಗ್ಗೆ ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿರುತ್ತದೆ. ಅಮಾನತುಗೊಂಡಿದ್ದ ಗುಜರಾತ್‌ನ ಹಿರಿಯ ಐಎಎಸ್ ಅಧಿಕಾರಿ ಪ್ರದೀಪ್ ಶರ್ಮಾ, ಪ್ರಸ್ತುತ ಬಿಜೆಪಿ ನಾಯಕರಾಗಿರುವ ಅಂದಿನ ಎಎಪಿ ಶಾಸಕ ಕಪಿಲ್ ಮಿಶ್ರಾ, ಪ್ರಮುಖ ಚಿಂತಕಿ ಮಧು ಕಿಶ್ವರ್ ಹಾಗೂ ಸುಬ್ರಮಣಿಯನ್ ಸ್ವಾಮಿ ಅವರಂತಹ ಗಣ್ಯರ ಹೇಳಿಕೆಗಳು ಮತ್ತು ಸುಪ್ರೀಂ ಕೋರ್ಟ್‌ಗೆ ಸಲ್ಲಿಕೆಯಾದ ಅಧಿಕೃತ ಅಫಿಡವಿಟ್‌ಗಳ ಆಧಾರದ ಮೇಲೆ ಈ ಪ್ರಕರಣದ ನೈಜ ಸಂಗತಿಗಳನ್ನು ಇಲ್ಲಿ ಎಳೆಎಳೆಯಾಗಿ ವಿಶ್ಲೇಷಿಸಲಾಗಿದೆ.

ಪ್ರದೀಪ್ ಶರ್ಮಾ ಅವರ ಸ್ಫೋಟಕ ಅಫಿಡವಿಟ್

2013ರ ನವೆಂಬರ್‌ನಲ್ಲಿ, ಅಮಾನತುಗೊಂಡಿದ್ದ ಐಎಎಸ್ ಅಧಿಕಾರಿ ಪ್ರದೀಪ್ ಶರ್ಮಾ ಸುಪ್ರೀಂ ಕೋರ್ಟ್‌ಗೆ ಹೊಸದಾಗಿ ಅರ್ಜಿಯೊಂದನ್ನು ಸಲ್ಲಿಸಿದ್ದರು. 2004ರಲ್ಲಿ 27 ವರ್ಷದ ಯುವ ವಾಸ್ತುಶಿಲ್ಪಿಯನ್ನು (ಲೇಡಿ ಆರ್ಕಿಟೆಕ್ಟ್) ತಾವೇ ಖುದ್ದಾಗಿ ನರೇಂದ್ರ ಮೋದಿಯವರಿಗೆ ಪರಿಚಯಿಸಿದ್ದಾಗಿ ಶರ್ಮಾ ತಮ್ಮ ಅಫಿಡವಿಟ್‌ನಲ್ಲಿ ಉಲ್ಲೇಖಿಸಿದ್ದರು. ಶರ್ಮಾ ಅವರ ಗಂಭೀರ ಆರೋಪದ ಪ್ರಕಾರ, ಆ ಯುವತಿ ಮತ್ತು ಮೋದಿಯವರ ನಡುವೆ ಆಪ್ತತೆ ಇತ್ತು. ಆಕೆಯ ಮತ್ತು ಓರ್ವ ಪುರುಷನ ಆಕ್ಷೇಪಾರ್ಹ ದೃಶ್ಯಗಳಿರುವ ವಿಡಿಯೊ ಕಾಂಪ್ಯಾಕ್ಟ್ ಡಿಸ್ಕ್ () ಒಂದು ತಮ್ಮ ಬಳಿ ಇದೆ ಎಂದು ಮೋದಿ ತಪ್ಪಾಗಿ ಭಾವಿಸಿದ್ದರು. ಈ ಸಿಡಿ () ಹೊರಬಂದರೆ ಎಚ್ಚರಿಕೆಯಿಂದ ಕಟ್ಟಿಕೊಂಡಿರುವ ತಮ್ಮ ವರ್ಚಸ್ಸಿ ಗೆ ಮತ್ತು ರಾಜಕೀಯ ಭವಿಷ್ಯಕ್ಕೆ ಧಕ್ಕೆಯಾಗಲಿದೆ ಎಂಬ ಭೀತಿಯಿಂದಲೇ ಮೋದಿಯವರು ತಮ್ಮ ವಿರುದ್ಧ 2010 ರಿಂದ 2012ರ ನಡುವೆ ಸುಳ್ಳು ಪ್ರಕರಣಗಳನ್ನು ದಾಖಲಿಸಿ ಜೈಲಿಗೆ ಕಳುಹಿಸುವ ಮೂಲಕ ಸೇಡು ತೀರಿಸಿಕೊಂಡರು ಎಂದು ಶರ್ಮಾ ಆರೋಪಿಸಿದ್ದರು.

ಕಪಿಲ್ ಮಿಶ್ರಾ ಅವರ ನೇರ ವಾಗ್ದಾಳಿ

ದೆಹಲಿ ವಿಧಾನಸಭೆಯಲ್ಲಿ 2016ರಲ್ಲಿ ಈ ವಿಚಾರವಾಗಿ ಮಾತನಾಡಿದ್ದ ಕಪಿಲ್ ಮಿಶ್ರಾ ಅವರು ಅಕ್ಷರಶಃ ಗುಡುಗಿದ್ದರು.



''ಹಿರಿಯ ಐಎಎಸ್ ಅಧಿಕಾರಿಯೊಬ್ಬರು ಹಿಂದೂಸ್ತಾನದ ಸುಪ್ರೀಂ ಕೋರ್ಟ್‌ನಲ್ಲಿ ಅಫಿಡವಿಟ್ ಸಲ್ಲಿಸಿದ್ದು, ಅದರಲ್ಲಿ ಮೋದಿ ಮತ್ತು ಅಮಿತ್ ಶಾ ಅವರ ಕರಾಳ ಸತ್ಯವಿದೆ. ಎಎಪಿ ನಾಯಕ ಸಂದೀಪ್ ಕುಮಾರ್ ಅವರ ಸಿಡಿ ಹೊರಬಂದಾಗ ಅರವಿಂದ್ ಕೇಜ್ರಿವಾಲ್ ಅವರು ಕೇವಲ 15 ನಿಮಿಷಗಳಲ್ಲಿ ನಿರ್ದಾಕ್ಷಿಣ್ಯ ಕ್ರಮ ಕೈಗೊಂಡರು. ಆದರೆ, ಸುಪ್ರೀಂ ಕೋರ್ಟ್‌ನಲ್ಲಿರುವ 15 ನಿಮಿಷಗಳ ಮೋದಿ ಮತ್ತು ಅಮಿತ್ ಶಾ ಅವರ ರೆಕಾರ್ಡಿಂಗ್ ಮತ್ತು ಅಫಿಡವಿಟ್ ಬಗ್ಗೆ ಕಠಿಣ ನಿರ್ಧಾರ ತೆಗೆದುಕೊಳ್ಳುವ ಧೈರ್ಯ ಬಿಜೆಪಿಗೆ ಇದೆಯೇ?'' ಎಂದು ಸವಾಲು ಹಾಕಿದ್ದರು. ಈ ಮೂಲಕ ಮೋದಿ ಸಿಡಿ ವಿಚಾರವನ್ನು ಅವರು ಸದನದ ಅಧಿಕೃತ ದಾಖಲೆಗೆ ತರುವ ಪ್ರಯತ್ನ ಮಾಡಿದ್ದರು.

ಟೆಲಿಗ್ರಾಫ್ ಕಾಯ್ದೆ ಉಲ್ಲಂಘನೆ

ಸುಪ್ರೀಂ ಕೋರ್ಟ್‌ಗೆ ಸಲ್ಲಿಸಲಾದ ದಾಖಲೆಗಳ ಪ್ರಕಾರ, ಯುವ ವಾಸ್ತುಶಿಲ್ಪಿಯ ಮೇಲೆ ಗುಜರಾತ್ ಸರ್ಕಾರದ ಇಂಟೆಲಿಜೆನ್ಸ್ ಬ್ಯೂರೋ ಮತ್ತು ಎಟಿಎಸ್ ತೀವ್ರ ನಿಗಾ ಇರಿಸಿತ್ತು. ಅಂದಿನ ಗುಜರಾತ್ ಗೃಹ ಸಚಿವ ಅಮಿತ್ ಶಾ ಮತ್ತು ಪೊಲೀಸ್ ಅಧಿಕಾರಿ ಜಿ.ಎಲ್. ಸಿಂಘಾಲ್ ನಡುವಿನ ಫೋನ್ ಸಂಭಾಷಣೆಗಳ ಟೇಪ್‌ಗಳು ಮಾಧ್ಯಮಗಳಲ್ಲಿ ಬಿಡುಗಡೆಯಾಗಿದ್ದವು. ಈ ಸಂಭಾಷಣೆಗಳಲ್ಲಿ ಸಾಹೇಬ್ ಅವರ ಆದೇಶದ ಮೇರೆಗೆ ಯುವತಿಯ ಪ್ರತಿಯೊಂದು ಚಲನವಲನಗಳ ಮೇಲೆ ಕಣ್ಗಾವಲು ಇರಿಸಲಾಗಿತ್ತು ಎಂಬುದು ಬಹಿರಂಗವಾಗಿತ್ತು. ಇದು ವೈಯಕ್ತಿಕ ಗೌಪ್ಯತೆಯ ಹಕ್ಕು ಮತ್ತು ಭಾರತೀಯ ಟೆಲಿಗ್ರಾಫ್ ಕಾಯ್ದೆ-1885ರ ಸ್ಪಷ್ಟ ಉಲ್ಲಂಘನೆ ಎಂದು ಶರ್ಮಾ ಪರ ವಕೀಲರು ಸುಪ್ರೀಂ ಕೋರ್ಟ್‌ನಲ್ಲಿ ಬಲವಾಗಿ ವಾದಿಸಿದ್ದರು.

ಮಧು ಕಿಶ್ವರ್, ಸುಬ್ರಮಣಿಯನ್ ಸ್ವಾಮಿ ಅವರ ನಿಲುವುಗಳು

ಈ ವಿವಾದವು ಬೇರೆಯದೇ ಆಯಾಮವನ್ನು ಪಡೆದುಕೊಂಡಿದ್ದು ಚಿಂತಕಿ ಮಧು ಕಿಶ್ವರ್ ಅವರ ಹೇಳಿಕೆಗಳಿಂದ. ಯುವತಿಯ ಮೇಲೆ ಕಣ್ಗಾವಲು ಇರಿಸಿದ್ದು ಮೋದಿಯವರ ಸೂಚನೆಯ ಮೇರೆಗಲ್ಲ, ಬದಲಾಗಿ ಆ ಯುವತಿಯ ತಂದೆಯೇ ತಮ್ಮ ಮಗಳನ್ನು ಪ್ರದೀಪ್ ಶರ್ಮಾ ಅವರ ಕಿರುಕುಳದಿಂದ ರಕ್ಷಿಸಲು ಸರ್ಕಾರದಿಂದ ಪೊಲೀಸ್ ಭದ್ರತೆ ಕೋರಿದ್ದರು ಎಂದು ಮಧು ಮಧು ಕಿಶ್ವರ್ ಟಿವಿ ಚರ್ಚೆಗಳಲ್ಲಿ ಮತ್ತು ಟ್ವಿಟರ್‌ನಲ್ಲಿ ಪ್ರಬಲವಾಗಿ ವಾದಿಸಿದ್ದರು. ಇದರಿಂದ ತಮ್ಮ ತೇಜೋವಧೆಯಾಗಿದೆ ಎಂದು ಆರೋಪಿಸಿ ಪ್ರದೀಪ್ ಶರ್ಮಾ ಅವರು ಮಧು ಮಧು ಕಿಶ್ವರ್ ವಿರುದ್ಧ ಕ್ರಿಮಿನಲ್ ಮಾನನಷ್ಟ ಮೊಕದ್ದಮೆಯನ್ನು ದಾಖಲಿಸಿದ್ದರು. ಅಹಮದಾಬಾದ್ ನ್ಯಾಯಾಲಯ ಅದನ್ನು ವಿಚಾರಣೆಗೆ ಅಂಗೀಕರಿಸಿತ್ತು ಕೂಡ. ಇನ್ನು ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ ಅವರಂತಹ ಮುಖಂಡರು ಇಂತಹ ಸೂಕ್ಷ್ಮ ರಾಜಕೀಯ ವಿವಾದಗಳ ಬಗ್ಗೆ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಪ್ರತಿಕ್ರಿಯಿಸುತ್ತಾ ಬಂದಿದ್ದು, ರಾಜಕೀಯ ವಲಯದಲ್ಲಿ ಇದು ಬಿಸಿಬಿಸಿ ಚರ್ಚೆಯ ವಿಷಯವಾಗಿತ್ತು.

ನ್ಯಾಯಾಲಯದ ಅಂತಿಮ ತೀರ್ಮಾನವೇನು?

ಭಾರಿ ಕುತೂಹಲ ಕೆರಳಿಸಿದ್ದ ಈ ಕಾನೂನು ಹೋರಾಟದಲ್ಲಿ ಪ್ರದೀಪ್ ಶರ್ಮಾ ಅವರಿಗೆ ಕೊನೆಗೂ ಹಿನ್ನಡೆಯಾಯಿತು. ಆಗಸ್ಟ್ 13, 2014 ರಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನಲ್ಲಿ, ಸಿಬಿಐ ತನಿಖೆಗೆ ಕೋರಿದ್ದ ಶರ್ಮಾ ಅವರ ಅರ್ಜಿಯನ್ನು ಸ್ಪಷ್ಟವಾಗಿ ವಜಾಗೊಳಿಸಿತು. ಗಮನಾರ್ಹ ಸಂಗತಿಯೆಂದರೆ, ಶರ್ಮಾ ಅವರ ಪರ ಹಿರಿಯ ವಕೀಲರಾಗಿದ್ದ ಕಾಲಿನ್ ಗೊನ್ಸಾಲ್ವಿಸ್ ಅವರು ನ್ಯಾಯಾಲಯದ ಕಲಾಪದ ವೇಳೆ ಸ್ವತಃ ಹೇಳಿಕೆ ನೀಡಿ, ''ಮುಖ್ಯಮಂತ್ರಿಯವರ (ಮೋದಿ) ವಿರುದ್ಧ ಯಾವುದೇ ವೈಯಕ್ತಿಕ ಅನುಚಿತ ವರ್ತನೆಯ ಆರೋಪಗಳನ್ನು ಮಾಡುವ ಕನಿಷ್ಠ ಉದ್ದೇಶವೂ ನಮಗಿಲ್ಲ'' ಎಂದು ತಿಳಿಸಿದ್ದರು. ಇದರ ಅನ್ವಯ ಅಫಿಡವಿಟ್‌ನಲ್ಲಿದ್ದ ಆಕ್ಷೇಪಾರ್ಹ ಭಾಗಗಳನ್ನು ಅಧಿಕೃತವಾಗಿ ಹಿಂಪಡೆಯಲಾಗಿತ್ತು

ಮುಚ್ಚಿಹೋದ ಸತ್ಯ ಮತ್ತು ಉಳಿದುಕೊಂಡ ಅನುಮಾನಗಳು

ಭಾರಿ ಕುತೂಹಲ ಕೆರಳಿಸಿದ್ದ ಈ ಸ್ನೂಪ್‌ಗೇಟ್ ಮತ್ತು ಖಾಸಗಿ ಸಿಡಿ ಪ್ರಕರಣದ ಅಂತ್ಯವು ಹಲವು ರಾಜಕೀಯ ಅನುಮಾನಗಳಿಗೆ ಎಡೆಮಾಡಿಕೊಟ್ಟಿತು. ಅಧಿಕೃತ ನ್ಯಾಯಾಲಯದ ದಾಖಲೆಗಳ ಪ್ರಕಾರ, ಪ್ರದೀಪ್ ಶರ್ಮಾ ಅವರ ಪರ ವಕೀಲರು ದಿಢೀರನೆ ಮೋದಿಯವರ ಮೇಲಿದ್ದ ವೈಯಕ್ತಿಕ ಆರೋಪಗಳನ್ನು ಹಿಂಪಡೆದರು. ಹೀಗೆ ಅರ್ಜಿದಾರರೇ ಸ್ವತಃ ಆರೋಪಗಳಿಂದ ಹಿಂದೆ ಸರಿದಿದ್ದರಿಂದ, ಸುಪ್ರೀಂ ಕೋರ್ಟ್ 2014ರಲ್ಲಿ ತನಿಖೆಯ ಅರ್ಜಿಯನ್ನು ವಜಾಗೊಳಿಸಿತು.

ಆದರೆ, ಅಧಿಕಾರದ ಬಲವಂತ, ತನಿಖಾ ಸಂಸ್ಥೆಗಳ ಮೂಲಕ ಹಾಕಲಾದ ಒತ್ತಡ ಹಾಗೂ ಆಮಿಷಗಳಿಂದಾಗಿಯೇ ಈ ಪ್ರಕರಣದಲ್ಲಿ ಸತ್ಯವನ್ನು ವ್ಯವಸ್ಥಿತವಾಗಿ ಮುಚ್ಚಿಹಾಕಲಾಯಿತು ಮತ್ತು ಅರ್ಜಿದಾರರು ನ್ಯಾಯಾಲಯದಲ್ಲಿ ಆರೋಪಗಳನ್ನು ಹಿಂಪಡೆಯುವಂತೆ ಮಾಡಲಾಯಿತು ಎಂಬ ಬಲವಾದ ಆರೋಪಗಳು ವಿರೋಧ ಪಕ್ಷಗಳಿಂದ ಕೇಳಿಬಂದವು. ನ್ಯಾಯಾಲಯದ ಕಡತಗಳಲ್ಲಿ ಇದು ಕೇವಲ ಅರ್ಜಿದಾರರ ಹಿಂದೇಟಿನಿಂದ ವಜಾಗೊಂಡ ಪ್ರಕರಣವಾಗಿ ದಾಖಲಾದರೂ, ಅಧಿಕಾರದ ಪ್ರಭಾವದ ಮುಂದೆ ನೈಜ ಸಂಗತಿಗಳು ಎಂದಿಗೂ ಹೊರಬರಲಿಲ್ಲ ಎಂಬ ಅನುಮಾನಗಳು ಮಾತ್ರ ಇಂದಿಗೂ ಹಾಗೆಯೇ ಉಳಿದುಕೊಂಡಿವೆ.

ದಾವಣಗೆರೆ ಉಪಚುನಾವಣೆ: ಕಾಂಗ್ರೆಸ್ ವಿರುದ್ಧ ಮುಸ್ಲಿಂ ಮತದಾರರ ಪ್ರಚಾರ, ಪಾಠ ಕಲಿಯುವುದೇ ಹೈಕಮಾಂಡ್?

ದಾವಣಗೆರೆ ಮುಸ್ಲಿಮರು, ಯುವಜನರು ಪ್ರಚಾರದಲ್ಲಿ ಕಾಂಗ್ರೆಸ್ ಸೋಲಿಸಿ, ಕುಟುಂಬ ರಾಜಕೀಯ ಕೊನೆಗೊಳಿಸಿ. ಜಸ್ಟಿಸ್ ಫಾರ್ ಮೈನಾರಿಟಿಸ್, ಜಸ್ಟಿಸ್ ಫಾರ್ ಅಹಿಂದ ಹಾಗೂ ಜಸ್ಟಿಸ್ ಫಾರ್ ಮುಸ್ಲಿಂ ಎನ್ನುವಂತಹ ಭಿತ್ತಿಪತ್ರಗಳನ್ನು ಕೈಯಲ್ಲಿ ಹಿಡಿದು ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳ ವಾರ್ಡ್‌ಗಳಲ್ಲಿ ಜಾಗೃತಿ ಅಭಿಯಾನ ಕೈಗೊಂಡಿದ್ದಾರೆ.

ರಾಜ್ಯದಲ್ಲಿ ನಡೆಯುತ್ತಿರುವ ಉಪಚುನಾವಣೆಗಳ ನಡುವೆ ದಾವಣಗೆರೆ ಕ್ಷೇತ್ರವು ಹೈ ವೋಲ್ಟೇಜ್ ಕ್ಷೇತ್ರವಾಗಿ ಹೊರಹೊಮ್ಮಿದ್ದು, ರಾಜ್ಯದ ಗಮನ ಅಷ್ಟೇ ಅಲ್ಲದೆ, ದೇಶದ ಗಮನವೂ ಈ ಕ್ಷೇತ್ರದತ್ತ ಕೇಂದ್ರೀಕೃತವಾಗಿದೆ. ರಾಜಕೀಯ ಪಕ್ಷಗಳ ತಂತ್ರಗಳು, ಅಭ್ಯರ್ಥಿಗಳ ಆಯ್ಕೆ ಹಾಗೂ ಸಮುದಾಯಗಳ ಮತದಾನ ಪ್ರವೃತ್ತಿ ಈ ಕ್ಷೇತ್ರವನ್ನು ರಾಜಕೀಯದ ಕಣಜವಾಗಿಸಿವೆ.



ಈ ಬಾರಿ ಚುನಾವಣೆಯಲ್ಲಿ ಮುಸ್ಲಿಂ ಮತದಾರರ ಮನಸ್ಥಿತಿ ರಾಜಕೀಯ ವಲಯದಲ್ಲಿ ವಿಶೇಷ ಚರ್ಚೆಗೆ ಗ್ರಾಸವಾಗಿದೆ. ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಆಯ್ಕೆ ಹಾಗೂ ಕುಟುಂಬ ರಾಜಕೀಯದ ಪ್ರಭಾವದ ಬಗ್ಗೆ ಸಮುದಾಯದೊಳಗೆ ಅಸಮಾಧಾನ ವ್ಯಕ್ತವಾಗುತ್ತಿರುವುದು ವರದಿಯಾಗಿದೆ. ಈ ಹಿನ್ನೆಲೆಯಲ್ಲಿ ಮುಸ್ಲಿಂ ಮತದಾರರು ತಮ್ಮ ಮತದಾನದ ಮೂಲಕ ಸ್ಪಷ್ಟ ಸಂದೇಶ ನೀಡಲಿದ್ದಾರೆಯೇ ಎಂಬ ಕುತೂಹಲ ಹೆಚ್ಚಾಗಿದೆ.

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ ಸೋಲಿಸಬೇಕು ಎಂಬ ಅಭಿಪ್ರಾಯದ ಪ್ರಚಾರ ನಡೆಯುತ್ತಿರುವುದು ಗಮನಾರ್ಹವಾಗಿದೆ. ಇದರಿಂದ ಪಕ್ಷದ ಹೈಕಮಾಂಡ್ ಮತ್ತು ಸ್ಥಳೀಯ ನಾಯಕತ್ವದ ವಿರುದ್ಧ ಅಸಮಾಧಾನ ವ್ಯಕ್ತಪಡಿಸುವ ಪ್ರಯತ್ನ ನಡೆಯುತ್ತಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಆದರೆ ಈ ತಂತ್ರ ಯಶಸ್ವಿಯಾಗುತ್ತದೆಯೇ ಅಥವಾ ಮತದಾರರು ವಿಭಿನ್ನ ನಿರ್ಧಾರ ಕೈಗೊಳ್ಳುವರೆಯೇ ಎಂಬುದು ಚುನಾವಣಾ ಫಲಿತಾಂಶದ ನಂತರವೇ ಸ್ಪಷ್ಟವಾಗಲಿದೆ.

ಒಂದು ವೇಳೆ ದಾವಣಗೆರೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಸೋತರೆ, ಅದು ಮುಸ್ಲಿಂ ಸಮುದಾಯದ ವಿಭಜನೆಯ ಕಾರಣವೆಂದು ಸ್ಪಷ್ಟ ಪ್ರತಿಬಿಂಬವಾಗಿ ಪರಿಗಣಿಸಲಾಗುತ್ತದೆ. ಮತ್ತೊಂದೆಡೆ, ಕಾಂಗ್ರೆಸ್ ಗೆದ್ದರೆ ಮುಸ್ಲಿಮರ ವಿರೋಧವಿದ್ದರೂ ಕಾಂಗ್ರೆಸ್ ಗೆದ್ದಿದೆವೆಂದು ಮುಸ್ಲಿಂ ಬಾಹುಳ್ಯ ಪ್ರದೇಶಗಳಲ್ಲಿ ಮುಂದಿನ ದಿನಗಳಲ್ಲಿ ಟಿಕೆಟ್ ಹಂಚಿಕೆಯಲ್ಲಿ ಬದಲಾವಣೆ ಆಗಬಹುದೇ ಎಂಬ ಪ್ರಶ್ನೆಯೂ ಕೂಡ ಮುಸ್ಲಿಮರಲ್ಲಿ ಉದ್ಭವಿಸಿದೆ.

ದಾವಣಗೆರೆ ಉಪಚುನಾವಣೆ ಮುಸಲ್ಮಾನರಿಗೆ ಮಾಡು ಇಲ್ಲವೇ ಮಡಿ ಎನ್ನುವ ಪಂದ್ಯವಾಗಿದೆ. ಮುಸ್ಲಿಂ ಬಾಹುಳ್ಯ ಪ್ರದೇಶವಾದ ರಾಯಚೂರು, ವಿಜಯಪುರ, ಕಲಬುರಗಿ ಉತ್ತರ ಸೇರಿ ನಾನಾ ಕಡೆ ಮುಸ್ಲಿಮರು ಸ್ಪರ್ಧಿಸಿದರೆ ಮತಗಳು ಛಿದ್ರವಾಗಿ ಸೋಲಾಗುತ್ತದೆ. ಮುಸ್ಲಿಮೇತರರಿಗೆ ಟಿಕೆಟ್ ನೀಡುವಲ್ಲಿ ಕಾಂಗ್ರೆಸ್ ಹೈ ಕಮಾಂಡ್ ಮುಂದಾಗುತ್ತದೆ. ಮುಸ್ಲಿಂ ಶಾಸಕರು ಕಡಿಮೆಯಾಗುತ್ತಾರೆ, ನಾವೆಲ್ಲಾ ವಂಚನೆಗೆ ಒಳಗಾಗುತ್ತೇವೆ ಎಂಬ ಗೋಳಾಗಿದೆ.

ದಾವಣಗೆರೆ ಹಿರಿಯ ಮುಸ್ಲಿಂ ಮುಖಂಡ ವಿಧಾನ ಪರಿಷತ್ ಸದಸ್ಯ ಕೆ ಅಬ್ದುಲ್ ಜಬ್ಬಾರ್ ಅವರನ್ನು ಪ್ರಚಾರಕ್ಕೆ ಕರೆಯುತ್ತಿಲ್ಲವೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಹಾಗಿದ್ದರೆ ಶಾಮನೂರು ಕುಟುಂಬಕ್ಕೆ ಮುಸ್ಲಿಂಮರ ಅವಶ್ಯಕತೆ ಇಲ್ಲವೇ? ಒಂದು ವೇಳೆ ಅವಶ್ಯಕತೆ ಇಲ್ಲದಿದ್ದರೆ ಕಾಂಗ್ರೆಸ್ ಅಭ್ಯರ್ಥಿ ಸೋತರೆ ಮುಸ್ಲಿಮರ ಮೇಲೆ ದೂರುವುದು ಅಕ್ಷಮ್ಯವಾಗುತ್ತದೆ.

ದಾವಣಗೆರೆ ಮುಸ್ಲಿಮರು, ಯುವಜನರು ಪ್ರಚಾರದಲ್ಲಿ ಕಾಂಗ್ರೆಸ್ ಸೋಲಿಸಿ, ಕುಟುಂಬ ರಾಜಕೀಯ ಕೊನೆಗೊಳಿಸಿ. ಜಸ್ಟಿಸ್ ಫಾರ್ ಮೈನಾರಿಟಿಸ್, ಜಸ್ಟಿಸ್ ಫಾರ್ ಅಹಿಂದ ಹಾಗೂ ಜಸ್ಟಿಸ್ ಫಾರ್ ಮುಸ್ಲಿಂ ಎನ್ನುವಂತಹ ಭಿತ್ತಿಪತ್ರಗಳನ್ನು ಕೈಯಲ್ಲಿ ಹಿಡಿದು ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳ ವಾರ್ಡ್‌ಗಳಲ್ಲಿ ಜಾಗೃತಿ ಅಭಿಯಾನ ಕೈಗೊಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ಕೆಲ ಕಾಂಗ್ರೆಸ್ ಮುಖಂಡರು ಹಾಗೂ ಧಾರ್ಮಿಕ ನಾಯಕರು ಕಾರ್ಯಕರ್ತರಿಗೆ ವಿವಿಧ ಸಂದೇಶಗಳನ್ನು ನೀಡುತ್ತಿರುವುದು ರಾಜಕೀಯ ಚಟುವಟಿಕೆಯನ್ನು ಮತ್ತಷ್ಟು ಚುರುಕುಗೊಳಿಸಿದೆ. ಇನ್ನು ಮುಖ್ಯಮಂತ್ರಿ, ಡಿಕೆ ಶಿವಕುಮಾರ್, ಸುರ್ಜೇವಾಲಾ ಸೇರಿದಂತೆ ಪ್ರಮುಖ ನಾಯಕರು ಮುಸ್ಲಿಂ ಮುಖಂಡರೊಂದಿಗೆ ಸಭೆ ನಡೆಸಿ ಪಕ್ಷದ ಗೆಲುವಿಗಾಗಿ ಒಗ್ಗಟ್ಟಿನಿಂದ ಕೆಲಸ ಮಾಡುವಂತೆ ಕರೆ ನೀಡಿದ್ದಾರೆ.

ಈ ಎಲ್ಲ ಬೆಳವಣಿಗೆಗಳ ನಡುವೆ ದಾವಣಗೆರೆ ಉಪಚುನಾವಣೆ ರಾಜ್ಯ ರಾಜಕೀಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅಲ್ಪಸಂಖ್ಯಾತರ ವಿರೋಧದ ಅಲೆಯಾಗಿ ಮನೆ ಮನೆಗೆ ಹೋಗಿ ಪ್ರಚಾರಿಸುತ್ತಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ ಸೋಲಿಸಿ ಹೈ ಕಮಾಂಡ್‌ಗೆ ಪಾಠ ಕಲಿಸುತ್ತಾರೆಯೇ, ಕುಟುಂಬ ರಾಜಕೀಯಕ್ಕೆ ಇಂದು ಕೊನೆಯಾಗುವುದೇ? ಎಂಬುದನ್ನು ಕಾದು ನೋಡಬೇಕಾಗಿದೆ.

ದೊಡ್ಡ ಹನುಮಂತ ದೇವರ ಅದ್ದೂರಿ ಜಾತ್ರಾ ಮಹೋತ್ಸವ



ಲಿಂಗಸಗೂರು.ಏ.04 -

ಪಟ್ಟಣದ ದೊಡ್ಡ ಹನುಮಂತ ದೇವರ ಜಾತ್ರಾಮಹೋತ್ಸವದ ಅಂಗವಾಗಿ ಗುರುವಾರ ಸಂಜೆ ರಥೋತ್ಸವವು ಡೊಳ್ಳು,ಭಾಜಾ- ಭಜಂತ್ರಿಯೊಂದಿಗೆ ಅದ್ದೂರಿಯಾಗಿ ಜರುಗಿತು. ಪ್ರತಿ ವರ್ಷದಂತೆ ಈ

ವರ್ಷ ಅಂಬಾಭವಾನಿ ದೇವಿಯ ಉಡಿತುಂಬುವ ಕಾರ್ಯ ಕ್ರಮ ಹಾಗೂ ಬೆಳಗ್ಗೆ ದೊಡ್ಡ ಹನುಮಂತ ದೇವರಿಗೆ ವಿಶೇಷ ಪೂಜೆ, ಅಭಿಷೇಕ ಆರತಿ ಹಾಗೂ ಬೆಳಗ್ಗೆ 8 ಗಂಟೆಗೆ ಪಲ್ಲಕ್ಕಿ ಉತ್ಸವ ಕಾರ್ಯಕ್ರಮ ನಡೆದವು . ಸಂಜೆ 7 ಗಂಟೆಗೆ ಹನುಮಂತ

ದೇವರ ಉತ್ಸವ ಮೂರ್ತಿ ಹಾಗೂ ರಥಕ್ಕೆ ಪೂಜೆ ಸಲ್ಲಿಸಿದ ಬಳಿಕ ರಥೋತ್ಸವ ಕಾರ್ಯಕ್ರಮ ಜರುಗಿತು. ರಥೋತ್ಸವದಲ್ಲಿ ದೇವಸ್ಥಾನ ಸಮಿತಿ ಸದಸ್ಯರು, ಮಹಿಳೆಯರು ಮಕ್ಕಳು ಸೇರಿದಂತೆ ಸಾವಿರಾರು ಜನ ಭಕ್ತರು ಭಾಗವಹಿಸಿದ್ದರು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR